ಮಾನಸ

ನವೆಂಬರ್ 2003 ತಿಂಗಳ ಪತ್ರಿಕೆ

- ದಲಿತ ಮಹಿಳೆಯರ ಮೇಲಿನ ದೌರ್ಜನ್ಯಗಳು
- ಜನಪದ ಸಾಹಿತ್ಯ ಸಂಗ್ರಹ ಹಾಗೂ ಅಧ್ಯಯನದಲ್ಲಿ ಪುರುಷ ರಾಜಕಾರಣ : ನವೋದಯ ಸಂದರ್ಭವನ್ನು ಅನುಲಕ್ಷಿಸಿ

ಮಾನಸ

ತಿಂಗಳ ಪತ್ರಿಕೆ ನವಂಬರ್ 2003
ಸಂಪುಟ 18 ಸಂಚಿಕೆ : 10

ವಿಳಾಸ
" ಮಾನಸ " ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ - ಪೋಸ್ಟ್
ಬೆಂಗಳೂರು - 560 067

ಸೂಚನೆ : ಸೂಚನೆ : ಬಿಡಿಪ್ರತಿ 10-00 ರೂ.
ವಾರ್ಷಿಕ ಚಂದಾ 100-00 ರೂ.
ಸಂಸ್ಥೆಗಳಿಗೆ 150-00 ರೂ.

✸ ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ...

ಮೈಸೂರು

ಮೈಸೂರಿನಲ್ಲಿ ರುವ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ
***ವೆಂ.ವನಜ :** 2329, 12ನೇ ಮೇನ್, 2 ನೇ ಹಂತ ವಿಜಯನಗರ, ಮೈಸೂರು - 570 017*

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ,
ಪಂಚಾಯಿತಿ ರಸ್ತೆ, ಕಾಡುಗೋಡಿ - ಅಂಚೆ, ಬೆಂಗಳೂರು - 560 067



ಸಂಪಾದಕೀಯ

ಮಹಿಳೆಯರ ಸಮಸ್ಯೆಯನ್ನು ಕುರಿತು ಚರ್ಚಿಸುವಾಗ ದಲಿತ ಮಹಿಳೆಯರ ಸಮಸ್ಯೆಗಳ ಬಗ್ಗೆ ವಿಶಿಷ್ಠವಾದ ಗಮನವನ್ನು ಕೊಡಲೇ ಬೇಕಾಗುತ್ತಿದೆ. ತುಳಿತಕ್ಕೆ ಒಳಗಾದ ಮಹಿಳೆ ಎಚ್ಚೆತ್ತು, ಜಾಗೃತಗೊಂಡು ಸಂಘಟಿತರಾಗುವ ಪ್ರಯತ್ನದ ಹಿನ್ನಲೆಯಲ್ಲಿನ ಮನಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ವಂಚಿತ ಮಹಿಳೆಯರು ಅವಕಾಶ, ಸೌಲಭ್ಯಗಳನ್ನು ಪಡೆಯುವಲ್ಲಿ ಜಾಗೃತಗೊಳ್ಳುತ್ತಿರುವುದು, ಸಂಘಟಿತರಾಗುತ್ತಿರುವುದು ಮಹಿಳಾ ಚಳುವಳಿಯ ಫಲವಾದರೂ ಈ ಅವಕಾಶಗಳನ್ನು ವಿಶೇಷವಾಗಿ ದಲಿತ, ಪರಿಶಿಷ್ಟ ಮಹಿಳೆಯರ ಜೊತೆ ಹಂಚಿಕೊಳ್ಳುವಾಗ ತಾರತಮ್ಯ ಮಾಡುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಸ್ತ್ರೀಶಕ್ತಿ, ಸ್ವಶಕ್ತಿ, ಸ್ವಸಹಾಯ ಗುಂಪುಗಳ ಮೂಲಕ ಸಂಘಟಿತರಾಗುತ್ತಿದ್ದಾರೆ, ಲಿಂಗ ತಾರತಮ್ಯ, ನಿರಕ್ಷರತೆ ಆರೋಗ್ಯ, ಸರಾಯಿ ವಿರುದ್ಧ ಹೋರಾಡುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ಪ್ರಕ್ರಿಯೆಯಲ್ಲಿ ದಲಿತ ಮಹಿಳೆಯರನ್ನು ದೂರವಿಡುವಮನೋಭಾವನೆಯನ್ನು ಮೇಲ್ಜಾತಿ, ಮೇಲ್ವರ್ಗದ ಮಹಿಳೆಯರಲ್ಲಿ ಕಾಣಬಹುದಾಗಿದೆ.

ಬಿಸಿಯೂಟದ ಯೋಜನೆಯ ಅನುಷ್ಠಾನದಲ್ಲಿ ಈ ಮನೋಭಾವನೆಯನ್ನು ಸ್ಪಷ್ಟವಾಗಿ ಕಾಣಬಹುದು. ಬಿಸಿಯೂಟವನ್ನೂ ಮಾಡುವ ಜವಾಬ್ದಾರಿಯನ್ನು ಸ್ತ್ರೀಶಕ್ತಿ ಗುಂಪುಗಳು ವಹಿಸಿಕೊಂಡ ನಂತರ ದಲಿತ ಮಹಿಳಯರನ್ನು ಜಾಣತನದಿಂದ ಹೊರಗಿಡುವ ಚಾಕಚಕ್ಯತೆಯನ್ನು ಗುಂಪುಗಳು ತೋರಿಸಿದೆ. 'ಅಡಿಗೆ'ಯನ್ನು ದಲಿತ ಮಹಿಳೆಯರು ಮಾಡಬಾರದೆಂದು ಮುಷ್ಕರ ಹೂಡಿದ ಗ್ರಾಮಗಳು ಸಹ ಇವೆ. ಸಡಗರದ ಸೌಲಭ್ಯಗಳನ್ನು ಪಡೆಯಲು ನಾಮಕಾವಸ್ಥೆಗಾಗಿ ದಲಿತ ಮಹಿಳೆಯರನ್ನು ಗುಂಪಿನಲ್ಲಿ ಸೇರಿಸಿಕೊಂಡ ನಿದರ್ಶನಗಳು ಸಹ ಇವೆ.

ದಲಿತ ಮಹಿಳೆಯರ ಮೇಲೆ ಅಮಾನುಷ ದೌರ್ಜನ್ಯಗಳ ಜೊತೆಗೆ ಸೂಕ್ಷ್ಮ ಹಂತದಲ್ಲಿಯು ಪಕ್ಷಪಾತ, ವಂಚನೆ ನಡೆಯುತ್ತಲೇ ಬಂದಿವೆ. ಗ್ರಾಮೀಣ ಪ್ರದೇಶದಲ್ಲಿ ಇಂತಹ ಸಮಸ್ಯೆಗಳನ್ನು ಬೆಳಕಿಗೆ ತರುವ ಸಂಘಟನೆಗಳ, ವೇದಿಕೆಗಳ ಕೊರತೆ ಕಂಡುಬರುತ್ತಿದೆ. ದಲಿತ ಜನಾಂಗಕ್ಕೆ ದನಿಯಾಗಬೇಕಾಗಿದ್ದ ಸಂಘಟನೆಗಳು ಹರಿದು ಹಂಚಿ ಹೋಗಿವೆ. ಪಕ್ಷ ರಾಜಕೀಯ, ಅಧಿಕಾರ ಆಕಾಂಕ್ಷೆಯಿಂದಾಗಿ ಅವುಗಳ ಮೂಲ ಆಶಯವೇ ಬತ್ತಿ ಹೋಗಿವೆ. ಗ್ರಾಮಾಂತರ ಪ್ರದೇಶದಲ್ಲಿ ದಲಿತ ಮಹಿಳೆಯರು ಎದುರಿಸುವ ಸಮಸ್ಯೆಗಳು

ಹಲವಾರು ಕಾರಣಗಳಿಂದ ಮಾನಸ ಪತ್ರಿಕೆಯ ಪ್ರಕಟಣೆ ತಡವಾಗಿದೆ. ಓದುಗರು ಸಹಕರಿಸಬೇಕು. ಜೊತೆಗೆ ಮಾನಸದ ನಿರಂತರತೆ ಕಾಯಲು ನಿಮ್ಮ ಸಹಕಾರ ಅಗತ್ಯ. ದಯವಿಟ್ಟು ಮಾನಸಕ್ಕೆ ಲೇಖನ, ವಿಮರ್ಶೆ ಕಳಿಸಿಕೊಡಿ. ಚಂದಾದಾರರಾಗಿ ಉಳಿದ ಸಂಚಿಕೆಗಳನ್ನು ಜರೂರಾಗಿ ತರಲು ತಮ್ಮ ಸಹಕಾರ - ಸಲಹೆ ಅಗತ್ಯ.

ದಲಿತ ಮಹಿಳೆಯರ ಸಂಘಟನೆಯ ಕೊರತೆ, ಸಮರ್ಥ ನಾಯಕತ್ವದ ಕೊರತೆಯಿಂದಾಗಿ ಮುಚ್ಚಿ ಹೋಗುತ್ತಿವೆ. ಈ ದಿಕ್ಕಿನಲ್ಲಿ, ಕಾಳಜಿಯುಳ್ಳ ಸಂಘಟನೆಗಳು, ಮಹಿಳಾ ಸಂಘಟನೆಗಳು ಸಹ ಗಂಭೀರವಾಗಿ ಚಿಂತನೆ ನಡೆಸಬೇಕಾಗಿದೆ.

- ಸಂಪಾದಕೀಯ ಮಂಡಳಿ

ದಲಿತ ಮಹಿಳೆಯರ ಮೇಲಿನ ದೌರ್ಜನ್ಯಗಳು

ಡಾ. ಎಸ್. ಎಂ. ಮಂಗಳ

ಸಮಾಜದಲ್ಲಿ ಅತ್ಯಂತ ಕೆಳಮಟ್ಟದಲ್ಲಿ ಅಮಾನವೀಯತೆಯ ಸಂಕೋಲೆಯಲ್ಲಿ ಬದುಕುತ್ತಿರುವ ಜನಾಂಗವೆಂದರೆ ದಲಿತರು. ಮೊದಲು ದಲಿತರೆಂದರೆ ಯಾರು? ಎಂಬುದಾಗಿ ತಿಳಿಯುವುದು ಮುಖ್ಯವಾಗುತ್ತದೆ. ಇತಿಹಾಸದ ಪ್ರಕಾರ ಹೇಳುವುದಾದರೆ, ಭಾರತದ ಮೂಲನಿವಾಸಿಗಳು. ಭಾರತದೊಳಕ್ಕೆ ನುಗ್ಗಿದಂತಹ ಆರ್ಯರ ವಿರುದ್ಧ ಹೋರಾಟ ಮಾಡಿದವರು, ಹಾಗೂ ಪ್ರಪಂಚದಲ್ಲೆ ಮೊಟ್ಟಮೊದಲು ಸಿಂಧೂ ಕಣಿವೆಯಲ್ಲಿ ಪ್ರಾಚೀನ ನಾಗರೀಕತೆಗೆ ಹುಟ್ಟು ಹಾಕಿದವರು.

'ದಲಿತ'ರು ಕಾಲಾನುಕಾಲದಿಂದಲೂ ಯಾವುದೇ ಒಂದು ಗ್ರಾಮದ ಎಲ್ಲೆಯಿಂದ ಹೊರಗೆ ನೆಲೆಸಲ್ಪಟ್ಟವರಾಗಿದ್ದು, ಅವರನ್ನು ಅಸ್ಪೃಶ್ಯರೆಂದು ಕರೆಯಲಾಯಿತು. ಅಂದರೆ ಸ್ಪರ್ಶಕ್ಕೆ ಯೋಗ್ಯರಲ್ಲದವರು ಎಂಬುದಾಗಿ ಹಿಂದೂ ಜನಾಂಗದಿಂದ ದೂರವಿರಿಸಲ್ಪಟ್ಟವರು. ಇವರೆಲ್ಲರನ್ನು ಒಂದು-ಗೂಡಿಸಿ ಭಾರತದ ಸಂವಿಧಾನದಲ್ಲಿ ಇವರನ್ನು Scheduled Caste ಎಂಬುದಾಗಿ ಹೆಸರಿಸಲಾಯಿತು.

ದಲಿತರೆಂದರೆ the broken ಹೊಡೆಯಲ್ಪಟ್ಟ ಅಥವಾ the crushed ತುಳಿಯಲ್ಪಟ್ಟವರು. ಅಂದರೆ ಬ್ರಾಹ್ಮಣ ಹಿಂದೂ ಸಮಾಜದಲ್ಲಿ ಮೇಲ್ಜಾತಿ, ಮೇಲಿನ ವರ್ಗದವರಿಂದ ಹಾಗೂ ಮಡಿವಂತರಿಂದ ತುಳಿಯಲ್ಪಟ್ಟವರೆಂದರೆ 'ಅಸ್ಪೃಶ್ಯರು'. ಈ ಮೇಲೆ ಹೇಳಿದ ಇವರೆಲ್ಲರ ಸೇವೆ ಮಾಡುವುದಕ್ಕಾಗಿಯೇ ಹುಟ್ಟಿದವರು ಎಂಬುದಾಗಿ ಹಣೆಪಟ್ಟಿ ಕಟ್ಟಿಸಿಕೊಂಡವರು.

'ದಲಿತ' ಎಂಬ ಪದದ ಅರ್ಥೈಸುವಿಕೆಯೇ ಹೇಳುವಂತ ಸೀಳಲ್ಪಟ್ಟ, ಭೇಧಿಸಲ್ಪಟ್ಟ, ಅಥವಾ ದಮನಕ್ಕೆ ಒಳಗಾದವರೆಂದು ಅರ್ಥೈಸಲಾಗುತ್ತದೆ. ಸಮಾಜದಲ್ಲಿ ಎಲ್ಲಾ ರೀತಿಯಿಂದಲೂ ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮೇಲ್ಜಾತಿಯವರಿಂದ ದಮನಕ್ಕೆ, ತುಳಿತಕ್ಕೆ ಒಳಗಾದವರೆಂದೇ ಹೇಳಬೇಕಾಗುತ್ತದೆ.

ಭಾರತ ಸ್ವಾತಂತ್ರ್ಯ ಪಡೆದು 56 ವರ್ಷಗಳು ಕಳೆದ ನಂತರವೂ ದಲಿತರ ಸ್ಥಿತಿಯೇನೂ ಅಷ್ಟಾಗಿ ಸುಧಾರಣೆಯಾಗಿಲ್ಲವೆಂದೇ ಹೇಳಬೇಕಾಗಿದೆ. ಅದಕ್ಕಾಗಿ ಪ್ರತ್ಯಕ್ಷವಾದ ಕಾರಣಗಳನ್ನು ನೋಡುವುದಾದರೆ.......!

ಪ್ರತಿ ಎರಡು ಗಂಟೆಗೊಬ್ಬ ದಲಿತ ಕಿರುಕುಳಕ್ಕೊಳಗಾಗುತ್ತಾನೆ.

ಪ್ರತಿ ದಿನ ಎರಡು ದಲಿತರ ಕೊಲೆಯಾಗುತ್ತಿದೆ.

ಪ್ರತಿ ದಿನ ಎರಡು ದಲಿತರ ಮನೆಗಳು ಬೆಂಕಿಗೆ ಆಹುತಿಯಾಗುತ್ತಿವೆ.

ಪ್ರತಿ ದಿನ ಮೂರು ದಲಿತ ಮಹಿಳೆಯರು ಅತ್ಯಾಚಾರಕ್ಕೊಳಗಾಗುತ್ತಾರೆ.

ಹೀಗೆ ಪ್ರತಿ ದಿನವೂ ಹಲವಾರು ರೀತಿಯಲ್ಲಿ ದಲಿತರು ವ್ಯವಸ್ಥೆಯ ಬಲಿಪಶುಗಳಾಗುತ್ತಿದ್ದಾರೆ. ಈ ಮೇಲಿನ ದಾಖಲಿತ ಅಂಕಿ ಅಂಶಗಳು ದಲಿತರ ಮೇಲಿನ ದೌರ್ಜನ್ಯಗಳಾಗಿವೆ. ಇವು ಆರಕ್ಷಕ ಠಾಣೆಗಳಲ್ಲಿ ನೋಂದಾಯಿತವಾಗಿರುವ ಅಂಶಗಳಾಗಿವೆ.

ಮತ್ತೊಂದು ವರದಿಯ ಪ್ರಕಾರ 1991 ರಲ್ಲಿ ಸಿಗುವಂತಹ ಅಂಕಿ ಅಂಶಗಳು ಪ್ರಕಾರ -

21362 ದೌರ್ಜನ್ಯಗಳು ದಲಿತರ ಮೇಲೆ ನಡೆದಂತಹವುಗಳಾಗಿವೆ.

1067 ದಲಿತ ಮಹಿಳೆಯರು ಅತ್ಯಾಚಾರಕ್ಕೊಳಗಾದವರು.

731 ದಲಿತರ ಕೊಲೆಯಾಯಿತು.

645 ಘಟನೆಗಳಲ್ಲಿ ದಲಿತರ ಮನೆ ಹಾಗೂ ಆಸ್ತಿಪಾಸ್ತಿಗಳಿಗೆ ಬೆಂಕಿ ಇಡಲಾಗಿದೆ. (Dalit Woman, Leela Kumar, B.M.1995)

ಮತ್ತೊಂದು ವರದಿಯ ಪ್ರಕಾರ 1994 ಏಪ್ರಿಲ್ 22 ರಂದು ನಡೆದ ರಾಜ್ಯಸಭೆಯ ಪ್ರಶ್ನೋತ್ತರ ಸಂದರ್ಭದಲ್ಲಿ ಹೊರಬಂದ ಅಂಕಿ ಅಂಶಗಳ ಪ್ರಕಾರ (1991-93) ರಲ್ಲಿ.

62,000 ಸಾವಿರ ದೌರ್ಜನ್ಯಗಳು ನಡೆದಿದ್ದು ಅದರಲ್ಲಿ 52,000 ದೌರ್ಜನ್ಯಗಳು ಪರಿಶಿಷ್ಠ ಜಾತಿ, ಜನರ ಮೇಲೂ, ಉಳಿದ 9,579 ದೌರ್ಜನ್ಯಗಳು ಪರಿಶಿಷ್ಠ ಜನಾಂಗ (Tribe) ದ ಮೇಲೂ ನಡೆದಂತಹ ಘಟನೆಗಳಾಗಿವೆ. ಈ ಎಲ್ಲಾ ದೌರ್ಜನ್ಯಗಳಲ್ಲೂ ಹೆಚ್ಚಾಗಿ ಮಹಿಳೆಯರೇ ಬಲಿಪಶುಗಳಾಗುತ್ತಿರುವುದು ಇನ್ನೂ ಹೆಚ್ಚು ಶೋಚನೀಯವಾದದ್ದು.

ದಲಿತ ಪುರುಷರನ್ನು ಕೊಲೆ ಮಾಡುವುದು, ಮನೆಗೆ ಬೆಂಕಿ ಹಚ್ಚುವುದೇ ಆಗಲೀ ಕುಟುಂಬದ ಮೇಲಾಗುವ ಯಾವುದೇ ರೀತಿಯ ಕಷ್ಟ ನಷ್ಟಗಳು ಇವೆಲ್ಲವೂ ಹೆಚ್ಚಾಗಿ ಮಹಿಳೆಯರ ಸ್ಥಿತಿಗತಿಯ ಮೇಲೆ ಹಾಗೂ ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುವಂತಹವು. ಆಗ ಅಂತಹ ಕುಟುಂಬದ ಬದುಕು ಬೀದಿಗಿಳಿಯುತ್ತದೆ, ಮಕ್ಕಳು ಬೀದಿ ಪಾಲಾಗುತ್ತಾರೆ. ಇಂತಹ ಸಂದರ್ಭದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ

ಹೀಗೆ ಇಡೀ ಜನಾಂಗದ ಮೇಲಿನ ದೌರ್ಜನ್ಯದ ಪರಿಣಾಮ ಕುಟುಂಬಗಳಲ್ಲಿ ಮಹಿಳೆಯರ ಬದುಕನ್ನು ಅಧೋಗತಿಗೆ ಇಳಿಸುತ್ತಿದೆ.

ಯಾಕೆ ಈ ಎಲ್ಲಾ ರೀತಿಯ ದೌರ್ಜನ್ಯಗಳು ಬರೇ ದಲಿತ ಜನಾಂಗದ ಮಹಿಳೆಯರ ಮೇಲೆಯೇ ನಡೆಯುತ್ತಿವೆ ಎಂಬುದೇ ಇಲ್ಲಿ ಮುಖ್ಯವಾದ ಪ್ರಶ್ನೆ ! ದೇಶದಲ್ಲಿ ದಲಿತರು ಮಾತ್ರ ಬಡವರೇ, ದಲಿತರು ಮಾತ್ರ ಅವಿದ್ಯಾವಂತರೇ ? ಇತರೆ ಯಾವ ಜನಾಂಗದಲ್ಲೂ ಬಡವರಿಲ್ಲವೇ? ಅವಿದ್ಯಾವಂತರಿಲ್ಲವೇ? ಅವರ ಮೇಲೇಕೆ ಈ ದೌರ್ಜನ್ಯಗಳು ನಡೆಯುತ್ತಿಲ್ಲ ? ಇದಕ್ಕೆ ಉತ್ತರ ಬಡತನಕ್ಕಿಂತ ಹೆಚ್ಚಾಗಿ ದಲಿತರು ಕೀಳು ಜನಾಂಗವೆಂಬ ಒಂದೇ ಕಾರಣಕ್ಕಾಗಿ ಇವರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುವಂತಹ ಸಾಮಾಜಿಕ ವ್ಯವಸ್ಥೆ ಇದಾಗಿದೆ. ಇವರಿಗೆ ಯಾವುದೇ ರೀತಿಯ ಶಕ್ತಿಯಿಲ್ಲದಿರುವುದು.

ಇಂತಹ ಸುದ್ದಿಗಳು ಪ್ರತಿನಿತ್ಯವೂ ಪತ್ರಿಕೆ, ರೇಡಿಯೋ, ಟಿಲಿವಿಷನ್, ಹಲವಾರು ಮಾಧ್ಯಮಗಳ ಮೂಲಕವಾಗಿ ಇಂತಹ ಅಮಾನುಷ ಕೃತ್ಯಗಳು ನಮ್ಮ ಕಣ್ಣು ಕುಕ್ಕುವಂತೆ ಬರುತ್ತಿವೆ. ಇಂತಹ ಜನಾಂಗದ, ಜಾತಿ ವೈಷಮ್ಯದ ದೌರ್ಜನ್ಯಗಳಿಗೆ ಕೊನೆ ಎಂದು ?

ಇಂದಿಗೂ ಸಾಮಾಜಿಕ ಬಹಿಷ್ಕಾರಗಳು, ಹತ್ತು ಹಲವು ಕಾರಣಗಳಿಂದ ದಲಿತರನ್ನು ಶೋಷಿಸುವುದು ಉದಾ: ಗ್ರಾಮಗಳಲ್ಲಿ ದಲಿತರಿಗೇ ಮೀಸಲಾದ ಕಡೆಗಳಲ್ಲಿ ಮಾತ್ರ ಕೆರೆ, ಕಾಲುವೆಗಳಲ್ಲಿ, ಕೊಳವೆ ಬಾವಿಗಳಲ್ಲಿ ನೀರು ತೆಗೆಯುವುದು, ಬಟ್ಟೆ-ಪಾತ್ರೆ ತೊಳೆಯುವುದನ್ನು ನೋಡುತ್ತೇವೆ. ಇತರ ಸವರ್ಣೀಯರಿಗೆ ಮೀಸಲಾದ ಸ್ಥಳಗಳಲ್ಲಿ ಅವರು ಕಾಲಿಡುವಂತಿಲ್ಲ, ಮುಟ್ಟುವಂತಿಲ್ಲ. ದೇವಸ್ಥಾನಗಳಲ್ಲಿ ಗ್ರಾಮ ದೇವತೆಗಳಿಗೆ ಅವರಿಗೆ ಪ್ರವೇಶವಿಲ್ಲ. ಹೊಟೇಲುಗಳಲ್ಲಿ ನಿಗದಿತ ಸ್ಥಳದಲ್ಲಿ ಕೂರುವುದು, ತಿಂಡಿ ಕಾಫಿ ಕುಡಿಯುವುದು, ಇಂದಿಗೂ ಕಂಡುಬರುತ್ತದೆ. ಅಂತಹ ಹೋಟೆಲುಗಳಲ್ಲಿ ಕುಡಿದು-ತಿಂದು ಬಿಟ್ಟ ಪಾತ್ರೆಗಳನ್ನು ಅವರೇ ಶುಚಿ ಮಾಡುವುದನ್ನು ನಾವು ಕಾಣುತ್ತೇವೆ. ಅಷ್ಟೇ ಅಲ್ಲ ಊರ ಹೊರಗೆ ಅವರು ವಾಸ. ಊರಿನಲ್ಲಿ ಹೊಲ-ಗದ್ದೆಗಳಲ್ಲಿ ದುಡಿಯಲು ದಲಿತರೇ ಪ್ರಮುಖ ದುಡಿಮೆಗಾರರು. ಅವರಿಗೆ ಕಡಿಮೆ ಕೂಲಿ ಕೊಡುವುದರ ಜೊತೆಗೆ, ಎಲೆಗಳಲ್ಲಿ ಊಟ ಕೊಡುವುದು ಇದೊಂದು ರೀತಿಯಲ್ಲಿ 'ಅಸ್ಪೃಶ್ಯತೆ' ಗೆ ನೇರವಾದ ದೃಷ್ಟಾಂತ. ಈ ಎಲ್ಲಾ ಕಟ್ಟು ಪಾಡುಗಳು ಪುರುಷ-ಮಹಿಳೆ-ಮಕ್ಕಳೆನ್ನದೆ ಅವರನ್ನು ನಡೆಸಿಕೊಳ್ಳುವ ರೀತಿಯಾಗಿದೆ. ಅವರಿಗೆ ತಿರುಗಿ ಹೇಳುವ ಧೈರ್ಯವೂ ಇಲ್ಲದೆ ಎಷ್ಟೋ ದಲಿತರು ಇಂದೂ ಕೂಡ ಸವರ್ಣೀಯರ ಗುಲಾಮರಾಗಿ ಬದುಕು ಸಾಗಿಸುತ್ತಿದ್ದಾರೆ.

ಇದು ದೇಶದ ಎಲ್ಲಾ ಭಾಗಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತಲೇ ಇದೆ. ಮೇಲ್ಜಾತಿಯ ಬಡವ-ಶ್ರೀಮಂತರೆಂಬ ಬೇಧವಿಲ್ಲದೆ ಇವರ ಮೇಲೆ ಶೋಷಣೆಗಳು, ದೌರ್ಜನ್ಯಗಳು ನಡೆಯುತ್ತಿವೆ. ಹೀಗೆ ಹಲವಾರು ರೀತಿಯಲ್ಲಿ ದಲಿತರನ್ನು ಮಾನವ ಹಕ್ಕುಗಳಿಂದ ವಂಚಿಸಿ ದೂರ ಇಡಲಾಗಿದೆ.

ಇಡೀ ಜನಾಂಗವೇ ಈ ದೌರ್ಜನ್ಯಕ್ಕೆ ಒಳಗಾದರೆ, ಮಹಿಳೆಯರ ಪಾಡು ಇನ್ನು ಚಿಂತಾಜನಕವಾಗಿರುವುದು ಅವರ ಸಾಮಾಜಿಕ ಸ್ಥಾನ. ಮಾನಗಳನ್ನು ನೋಡಿದಾಗ. ಕೆಲವೊಂದು ದೌರ್ಜನ್ಯ ಪ್ರಕರಣಗಳು ದಲಿತ ಮಹಿಳೆಯರ ಮೇಲೆ ಪ್ರತಿನಿತ್ಯ ನಡೆಯುವ ವಿಚಾರಗಳಾಗಿದೆ. ಅತ್ಯಾಚಾರ, ಹಿಂಸೆ, ದೌರ್ಜನ್ಯಗಳು, ಅಪಹರಣ, ಮುಂತಾದುವುಗಳಿಂದ ದಲಿತ ಮಹಿಳೆಯರನ್ನು ಸಾಮಾಜಿಕವಾಗಿ ಇನ್ನೂ ಕೆಳಮಟ್ಟಕ್ಕೆ ತುಳಿಯುವತ್ತ ಅವರ ಮೇಲಿನ ದೌರ್ಜನ್ಯಗಳು ಹೆಚ್ಚು ಹೆಚ್ಚು ಸಂಭವಿಸುತ್ತಿವೆ. ಅಂತಹ ಹಲವಾರು ದಲಿತ (ಹೆಂಗಸರ) ಮಹಿಳೆಯರ ದುರಂತ ಕಥೆಗಳು ಒಂದಲ್ಲ, ಎರಡಲ್ಲ, ನೂರಾರು, ಸಾವಿರಾರು.

ಗುಜರಾತ್‌ನಲ್ಲಿ ಬರಗಾಲ ಪೀಡಿತ ಪ್ರದೇಶದ ಹಳ್ಳಿಯೊಂದರ ಮಹಿಳೆಯರು ಆ ಗ್ರಾಮದಲ್ಲಿನ ಚೌಧರಿಗಳಂತಹ ಶ್ರೀಮಂತ ಬಂಡವಾಳಷಾಹಿಗಳ, ಭೂ ಒಡೆಯರ ಹಿಡಿತಕ್ಕೆ ಸಿಕ್ಕಿ ಬಲಿಪಶುಗಳಾಗಿರುವ ದಲಿತ ಮಹಿಳೆಯರ ಮತ್ತೊಂದು ಕಥೆ ಹೀಗಿದೆ. ಈ ಮಹಿಳೆಯರ ಕುಟುಂಬದಲ್ಲಿನ ಪುರುಷರು ಊರಿನಿಂದ ದೂರದಲ್ಲಿ ಎಲ್ಲೋ ಕೆಲಸ ಮಾಡುವವರಾಗಿದ್ದು, ಶ್ರೀಮಂತರ / ಭೂ ಮಾಲೀಕರ ಕೈಕೆಳಗೆ ವರ್ಷಗಟ್ಟಲೇ ಜೀತದಾಳುಗಳಾಗಿಯೇ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಇಡೀ ಕುಟುಂಬದ ಹೊರೆ ಮಹಿಳೆಯರ ಮೇಲೆ ಬೀಳುತ್ತದೆ. ಅವರು ಬಡತನದ ಜೊತೆ, ಬರ ಪೀಡಿತ (ಕ್ಷಾಮ) ಕುಡಿಯುವ ನೀರು ಸಂಗ್ರಹಣೆ ಆಹಾರ, ಸಕಲವನ್ನು ಮಹಿಳೆಯರೇ ಒದಗಿಸಿಕೊಳ್ಳಬೇಕಾದ ಪರಿಸ್ಥಿತಿ. ಅಂತಹ ಸಂದರ್ಭದಲ್ಲಿ ಈ ದಲಿತ ಮಹಿಳೆಯರು ಭೂ ಮಾಲೀಕರು, ಶ್ರೀಮಂತರು-ಲೈಂಗಿಕ ಆಸೆಗಳಿಗೆ ಬಲಿಯಾದ ಮಹಿಳೆಯರ ಕಥೆ ತುಂಬಾ ಶೋಚನೀಯವಾದುದು, ಎಂಬುದಾಗಿ ಸರ್ಕಾರೇತರ ಸೇವಾ ಸಂಸ್ಥೆಯಲ್ಲಿ ಕೆಲಸ ಮಾಡುವ 'ನರೇಂದ್ರ ಪರ್ಮಾರ್' ಅವರ ಹೇಳಿಕೆ.

ದಿನನಿತ್ಯ ಮೇಲ್ವರ್ಗದವರು ನಡೆಸುವ ಅತ್ಯಾಚಾರದ ಬಗ್ಗೆ ಹೇಳುತ್ತಾ, ಕತ್ತಲಾದ ನಂತರ ಹೆಂಗಸರು ಬಾಗಿಲು ತೆಗೆಯುವುದಕ್ಕೂ ಭಯಪಡುವ ಮಹಿಳೆಯರಂತಹ ಅತ್ಯಾಚಾರದ ಪ್ರಕರಣಗಳನ್ನು ರಾಜಿಯ ಮೂಲಕ ಮುಚ್ಚಿ ಹಾಕುವುದು. ಇಷ್ಟಾದರೂ ಪರಿಹಾರ ಕಾರ್ಯ ನಡೆಯದೇ ಇರುವುದು. (ವಿಜಯ ಕರ್ನಾಟಕ ಮಹಿಳಾ ವಿಜಯ - ಜೂನ್ 20, 2000) ಮತ್ತೊಂದು ರೀತಿಯ ವಿಪರ್ಯಾಸ. ಗುಜರಾತ್ ರಾಜ್ಯಗಳಲ್ಲಿ ಅಲ್ಲದೆ ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯಪ್ರದೇಶ ಹೀಗೆ ಹಲವಾರು ರಾಜ್ಯಗಳು ಕೂಡ ದಲಿತ ಜನಾಂಗದ ಶೋಷಣೆಯಿಂದೇನು ಹೊರತಾಗಿಲ್ಲ.

ಭಾರತದಲ್ಲಿ ದಲಿತ - ಮಹಿಳೆಯರ ಪ್ರಮಾಣ, (SEX RATIO) ಪ್ರತಿ ಸಾವಿರ ಪುರಷರಿಗೆ 922. ಇದು ಭಾರತದ ಒಟ್ಟು ಮಹಿಳೆಯರ ಸರಾಸರಿ ಪ್ರಮಾಣಕ್ಕಿಂತಲೂ ಕಡಿಮೆ ಇರುವುದು ಕಂಡುಬರುತ್ತದೆ. ಹಾಗೆಯೇ ಅನಕ್ಷರತೆಯೂ ಕೂಡ ಅತ್ಯಂತ ಹೆಚ್ಚಿರುವುದು. ಈ ಅನಕ್ಷರತೆಯ ಪರಿಣಾಮದಿಂದಾಗಿ ದಲಿತ ಮಹಿಳೆಯರು ಅನೇಕ ರೀತಿಯಲ್ಲಿ ಶೋಷಣೆಗೆ, ದೌರ್ಜನ್ಯಕ್ಕೆ, ಹಾಗೂ ಹಲವಾರು ರೀತಿಯ ಮೂಢನಂಬಿಕೆಗಳಿಗೆ ಬಲಿಯಾಗುತ್ತಿರುವುದು ಹೆಚ್ಚುತ್ತಿದೆ. ಈ ಮೂಲಕವೇ ಅವರು ಸಮಾಜದಲ್ಲಿ ಕೆಳಮಟ್ಟದ ಸ್ಥಾನಮಾನ ಹೊಂದಿರುವುದಕ್ಕೆ ಮುಖ್ಯ ಕಾರಣಗಳಾಗಿವೆ.

ಆರ್ಥಿಕವಾಗಿ ಹಿಂದಿಳುದಿರುವಿಕೆ, ರಾಜಕೀಯ, ಸಾಮಾಜಿಕವಾಗಿ ಹಿಂದುಳಿದಿರುವಿಕೆ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರದಲ್ಲೂ, ದಲಿತ ಜನಾಂಗದ ಹಿಂದುಳಿದಿರುವಿಕೆಗೆ ಅಸ್ಪ್ರಶ್ಯತೆಯ ಆಚರಣೆ ಹಾಗೂ ಜಾತೀಯತೆಯು ಮುಖ್ಯ ಕಾರಣವಾಗುತ್ತದೆ. ಇಂದೂ ಕೂಡ ದಲಿತರು ಅನೇಕ ರೀತಿಯ ಸಾಮಾಜಿಕ ಬಹಿಷ್ಕಾರಗಳಿಂದ ಹೊರತಾಗಿಲ್ಲ. ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ದಲಿತ ಮಹಿಳೆಯರಾಗಲಿ ಪುರುಷರಾಗಲಿ, ಸವರ್ಣೀಯರ ದಬ್ಬಾಳಿಕೆಯ ಅಡಿಯಲ್ಲೇ ಬದುಕುತ್ತಿದ್ದಾರೆ. ಕಾಲಿಗೆ ಹಾಕುವ ಚಪ್ಪಲಿಯೂ ಕೂಡ ಪರಿಗಣನೆಗೆ ಬರುತ್ತದೆ. ಸವರ್ಣೀಯರ ಕೇರಿಗಳಲ್ಲಿ ದಲಿತರು ಚಪ್ಪಲಿ ಹಾಕಿಕೊಂಡು ನಡೆಯುವಂತಿಲ್ಲ. ಜಮೀನ್ದಾರುಗಳ ಮನೆಗಳಲ್ಲಿ ಇಂದಿಗೂ ಜೀತ ಪದ್ಧತಿಯೂ ಜೀವಂತವಾಗಿಯೇ ಇರುವುದನ್ನು ನಾವು ಕಾಣುತ್ತೇವೆ. ಜಮೀನ್ದಾರರ ಕಪಿಮುಷ್ಠಿಯಲ್ಲಿ ಜೀವನ ನಿರ್ವಹಿಸುತ್ತಿರುವ ಹಲವಾರು ಕುಟುಂಬಗಳು ಬಡ್ಡಿ ಹಣದ ಯಜಮಾನರ ದೌರ್ಜನ್ಯಕ್ಕೆ ಒಳಗಾಗುತ್ತಲೇ ಇದ್ದಾರೆ.

ಉದಾ: ಇತ್ತೀಚೆಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಹಂಗರಹಳ್ಳಿಯ ಜೀತದಾಳುಗಳ ಕಾಲುಗಳಿಗೆ ಸರಪಳಿ ಹಾಕಿ ಅವರಿಂದ ದುಡಿಸಿಕೊಳ್ಳುತ್ತಿದ್ದ ಪ್ರಸಂಗವನ್ನು ಕೇಳುತ್ತಿದ್ದರೆ, ಎಂತಹವರಿಗೂ ಕರುಳು ಮಿಡಿಯುತ್ತದೆ.

ಅಷ್ಟೇ ಅಲ್ಲದೆ ದಲಿತ ಮಹಿಳೆಯರ ಮೇಲೆ ನಡೆಯುವ ಸಾಮೂಹಿಕ ಅತ್ಯಾಚಾರಗಳು ರಾಜಕೀಯ ಹಾಗೂ ಧಾರ್ಮಿಕ ವಿಚಾರಗಳನ್ನು ಮುಂದಿಟ್ಟುಕೊಂಡು ಮಾಡುವಂತಹ ಈ ಎಲ್ಲಾ ದೌರ್ಜನ್ಯಗಳು ಇಡೀ ನಾಗರೀಕ ಸಮಾಜಕ್ಕೆ ನಾಚಿಕೆಗೇಡಿನ ಸಂಗತಿಯಾಗಿದೆ. ಮತ್ತೊಂದು ಕಡೆ ಮಹಿಳೆಯರನ್ನು ಬೆತ್ತಲಾಗಿಸಿ ಮೆರವಣಿಗೆ ಮಾಡಿಸುವಂತಹ ಹೇಯ ಕೃತ್ಯಗಳು ಇಂದಿನ ವಿದ್ಯಾವಂತ ಸಮಾಜ ನಾಚಿ ತಲೆ ತಗ್ಗಿಸಿ ಬೇಕಾದಂತಹ ವಿಷಯವಲ್ಲದೇ ಮತ್ತೇನು ? ಇದೆಲ್ಲವೂ ಜಾತಿ ಹೆಸರಿನ ಪಟ್ಟ ಕಟ್ಟಿ ದಲಿತ ಜನಾಂಗದ ಅಧೋಗತಿಗೆ ಅಪರೋಕ್ಷವಾಗಿ ತಮ್ಮ ಕೊಡುಗೆಯನ್ನು ನೀಡುತ್ತಿದೆಯೆಂದರೂ ತಪ್ಪಾಗಲಾರದು.

ಇಂದು ಪ್ರಪಂಚದಾದ್ಯಂತ, ರಾಷ್ಟ್ರದಾದ್ಯಂತ ಮಹಿಳಾ ಚಳುವಳಿಗಳು, ಸಂಘ-ಸಂಸ್ಥೆಗಳು, ಮಹಿಳಾಪರ ಹೋರಾಟಗಾರರೆಲ್ಲರೂ ಈ ದಲಿತ ಜನಾಂಗದ ಮಹಿಳೆಯರ ಬಗ್ಗೆ ದಿನನಿತ್ಯ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಹೋರಾಟ ಮಾಡುವಲ್ಲಿ ನಿಷ್ಪಲತೆಯನ್ನು ಹೊಂದಿವೆಯೆಂದೇ ಹೇಳಬೇಕಾಗುತ್ತದೆ. ಇದಕ್ಕೆ ಪ್ರಮುಖವಾಗಿ 'ಜಾತಿಯೂ ಕೂಡ' ಒಂದು ಅಂಶವೆಂದೇ ಹೇಳ ಬೇಕಾಗುತ್ತದೆ. ದಿನನಿತ್ಯದ ಪ್ರಚಾರ ಮಾಧ್ಯಮಗಳಾದ ಟಿ.ವಿ. ರೇಡಿಯೋ, ದಿನಪತ್ರಿಕೆ, ಮುಂತಾದುವುಗಳ ಮೂಲಕ ಸುದ್ದಿಗಳನ್ನು ಓದುವವರಾಗಲಿ, ಕೇಳುವವರಾಗಲಿ, ಅಥವಾ ನೋಡುವವರಾಗಲಿ ಅವರೆಲ್ಲರೂ ಇಂತಹ ವಿಚಾರಗಳ ಪರ ಸ್ಪಂದಿಸುವಂತಹ ಹೇಳಿಕೆಗಳನ್ನು ಕೊಡುವಲ್ಲಿ, ಅಂತಹವರ ವಿರುದ್ಧ ಹೋರಾಟಗಳನ್ನಾಗಲಿ ಮಾಡದೇ ಇರುವುದು. ಬಹುಷಃ ಇದಕ್ಕೆ ಉತ್ತರ ಮಹಿಳೆಯರೆಂದರೆ - ಎಲ್ಲರೂ ಒಂದೇ ಭಾವನೆಯಿಂದ ಇಂತಹ ವಿಚಾರಗಳನ್ನು ಒಟ್ಟುಗೂಡಿಸಿ ಉತ್ತರ ಹೇಳುವುದು ಸುಲಭ. ಇಂತಹ ಹಾರಿಕೆಯ ಉತ್ತರಗಳು ದಲಿತ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಶೋಷಣೆ, ಮತ್ತು ಅತ್ಯಾಚಾರಗಳು ಕಡಿಮೆಯಾಗದಿರುವುದೇ ಇದಕ್ಕೆ ಉದಾಹರಣೆ. ದಿನೇ ದಿನೇ ದಲಿತ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಇಂತಹ ದೌರ್ಜನ್ಯಗಳನ್ನು ತಡೆಗಟ್ಟಲು ಏಕಮಾತ್ರ ಅಸ್ತ್ರವೆಂದರೆ ಕಾನೂನು ಒಂದೇ.

ದಲಿತ ಜನಾಂಗದಲ್ಲಿನ ಸಂಘಟನೆಯ ಕೊರತೆ, ಅನಕ್ಷರತೆ, ಕಾನೂನಿನ ಬಗ್ಗೆ ತಿಳುವಳಿಕೆ ಕಡಿಮೆಯಿರುವುದು. ಮಹಿಳೆಯರಿಗಂತೂ ಕಾನೂನಿನ ಅರಿವೇ ಇಲ್ಲದಿರುವುದು ಇವುಗಳು ಮುಖ್ಯ ಕಾರಣವಾಗಿವೆ. ಇಡೀ ಸಮಾಜವೇ ಅವರನ್ನು ಕೀಳು ದೃಷ್ಟಿಯಿಂದ ನೋಡುವುದು ಹಾಗೂ ಮಾನವೀಯತೆ ದೃಷ್ಟಿಯಿಂದ ನೋಡದಿರುವುದೇ ಇವೆಲ್ಲಕ್ಕಿಂತ ಪ್ರಮುಖ ಕಾರಣವಾಗುತ್ತದೆ. ಇದಕ್ಕೆ ಪ್ರಸ್ತುತ ಉದಾಹರಣೆ ಗುಜರಾತಿನ ಘಟನೆಯಾಗಿದೆ. ಇಂತಹ ಅಮಾನವೀಯ ಕೃತ್ಯಗಳನ್ನು ಎಸಗಿದವರಾಗಲಿ, ಅಥವಾ ಅದಕ್ಕೆ ಕುಮ್ಮಕ್ಕು ಕೊಡುವವರಿಗಾಗಲಿ ಇಂದು ಸರಿಯಾದ ಶಿಕ್ಷೆ ದೊರೆಯದಿರುವುದು ಮತ್ತೊಂದು ಕಾರಣವಾಗಿದೆ.

ಒಟ್ಟಾರೆ ಹೇಳುವುದಾದರೆ ಇವರು ಸಮಾಜದ ಅತ್ಯಂತ ಕೆಳವರ್ಗದಲ್ಲಿ ಹುಟ್ಟಿದ ದಲಿತ ಜನಾಂಗದ ಮೇಲೆ ಶತಮಾನಗಳಿಂದ ಶೋಷಣೆ ನಡೆಯುತ್ತಲೇ ಬಂದಿದೆ. ದಲಿತ ಜನಾಂಗದ ಜನರು ಆರ್ಥಿಕ, ಸಾಮಾಜಿಕ, ಸಬಲತೆಯ ಜೊತೆಗೆ ಸ್ವಾಭಿಮಾನದ ನೆಲೆಯಲ್ಲಿ ಅವರು ಸಂಘಟಿತರಾಗ ಬೇಕಾಗಿದೆ. ವಿಶೇಷವಾಗಿ ದಲಿತ ಮಹಿಳೆಯರು ತಮ್ಮ ಮೇಲೆ ನಡೆಯುತ್ತಿರುವ ವಿಶಿಷ್ಟವಾದ ಶೋಷಣೆಯ ವಿರೋಧಿಸುವಲ್ಲಿ ಸಂಘಟಿತ ಪ್ರಯತ್ನ ನಡೆಸಬೇಕಾಗಿದೆ.

ಜನಪದ ಸಾಹಿತ್ಯ ಸಂಗ್ರಹ ಹಾಗೂ ಅಧ್ಯಯನದಲ್ಲಿನ ಪುರುಷ ರಾಜಕಾರಣ : ನವೋದಯ ಸಂದರ್ಭವನ್ನು ಅನುಲಕ್ಷಿಸಿ

ಡಾ.ಶೈಲಜ ಹಿರೇಮಠ, ಅಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಭಾಗ - 1

ಕರ್ನಾಟಕದ ಭೌಗೋಳಿಕ ಚೌಕಟ್ಟಿನಲ್ಲಿರುವವರೆಲ್ಲರೂ ಕನ್ನಡ ಭಾಷೆಯನ್ನು ಮಾತನಾಡಿದರೂ, ಕನ್ನಡ ಭಾಷೆ ಏಕ ರೂಪವನ್ನು ಹೊಂದಿಲ್ಲ. ಆಯಾ ಜಾತಿ, ಧರ್ಮ, ವರ್ಗ ಜನಾಂಗ ಹಾಗೂ ಪ್ರದೇಶಗಳ ಹಿನ್ನೆಲೆಯಲ್ಲಿ ಅವರವರ ಸಂಸ್ಕೃತಿ ಬೇರೆ ಬೇರೆಯಾಗಿರುವಂತೆಯೇ ಅವರಾಡುವ ಕನ್ನಡ ಭಾಷೆಗಳು ಭಿನ್ನ ಭಿನ್ನವಾಗಿವೆ. ವಾಸ್ತವಾಂಶ ಹೀಗಿದ್ದೂ ರಾಷ್ಟ್ರೀಯ ಚಳುವಳಿಯಲ್ಲಿ ರೂಪ ಪಡೆದ ಭಾರತೀಯ ಸಂಸ್ಕೃತಿ ಹಾಗೂ ಕರ್ನಾಟಕ ಸಂಸ್ಕೃತಿಗಳು ಏಕ ಮುಖವನ್ನು ಹೊಂದಿದ್ದವು. ಹೀಗೆ ಏಕಶಿಲ್ಪದಲ್ಲಿ ನಿರ್ವಚಿಸಲ್ಪಟ್ಟ ಭಾರತೀಯ ಸಂಸ್ಕೃತಿ ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಪ್ರಬಲವಾಗಿದ್ದ ವೈದಿಕ ಸಂಸ್ಕೃತಿಯನ್ನು ಒಳಗೊಂಡಿತ್ತು. ಈ ನಿರ್ವಚನದಲ್ಲಿ ಮೇಲ್ಜಾತಿ, ಮೇಲ್ವರ್ಗದ ಮಹಿಳೆಯರು ಮಾತ್ರ ಇದ್ದರು. ತಳಸಮುದಾಯದ ಮಹಿಳೆಯರು ಸಂಪೂರ್ಣ ನಿರ್ಲಕ್ಷಕ್ಕೆ ಒಳಗಾಗಿದ್ದರು.

ಆಧುನಿಕತೆ ಕುಟುಂಬವನ್ನು ವಿಚ್ಛಿದ್ರಗೊಳಿಸುತ್ತದೆ ಎಂದು ನಂಬಿದ ಮೇಲ್ಜಾತಿಯ ಮಧ್ಯಮ ವರ್ಗದ ಸಂಪದ್ರದಾಯಿಕ ಪುರುಷ ಚಳುವಳಿಗಾರರು ಹೆಣ್ಣನ್ನು ಗೃಹ ಕೇಂದ್ರಿತವಾಗಿಯೇ ಕಟ್ಟಿಕೊಟ್ಟರು. ಈ ಆಶಯದಿಂದಲೇ ಜನಪದ ಸಾಹಿತ್ಯ ಸಂಗ್ರಹ ಹಾಗೂ ಅಧ್ಯಯನಗಳು ನಡೆದವು. ವಸಾಹತುಶಾಹಿಯ ಆಧುನಿಕತೆಯು ಮಹಿಳೆಯ ಮೇಲೆ ಬೀರಿದ ಹಾಗೂ ಬೀರಬಹುದಾದ ಪರಿಣಾಮಗಳ ಬಗ್ಗೆ ನವೋದಯ ಸಂದರ್ಭದಲ್ಲಿದ್ದ ರಾಷ್ಟ್ರೀಯವಾದಿಗಳು ಯಾವ ನಿಲುವುಗಳನ್ನು ತಳೆದಿದ್ದರು ಎನ್ನುವುದು ಜನಪದ ಸಾಹಿತ್ಯ ಸಂಗ್ರಹ ಹಾಗೂ ಅಧ್ಯಯನಗಳ ಮೂಲಕ ತಿಳಿಯಬಹುದಾಗಿದೆ. ಆರಂಭದ ಜನಪದ ಸಾಹಿತ್ಯ ಸಂಗ್ರಹ ಹಾಗೂ ಅಧ್ಯಯನಗಳು ಪುರುಷ ನಿಷ್ಟವಾಗಿವೆಯೇ? ಏಕಪಕ್ಷೀಯ ನಿಲುವುಗಳನ್ನು ಪ್ರತಿಪಾದಿಸಿವೆಯೇ ? ಮಹಿಳೆ, ಆಧುನಿಕ ಶಿಕ್ಷಣ ಹಾಗೂ ಸೌಲಭ್ಯಗಳಿಗೆ ಮುಖಾಮುಖಿಯಾಗುವುದನ್ನು ಅಂದಿನ ಸುಶಿಕ್ಷಿತ ಪುರುಷರು ಏನೆಂದು ನಿರ್ವಚಿಸಿದರು ? ಈ ಮೊದಲಾದ ಸಂಗತಿಗಳನ್ನು ಜನಪದ ಸಾಹಿತ್ಯ ಸಂಗ್ರಹ ಹಾಗೂ ಅಧ್ಯಯನಗಳನ್ನು ಇಟ್ಟುಕೊಂಡು ವಿಶ್ಲೇಷಿಸುವ ಜರೂರಿದೆ. ಈ ನಿಟ್ಟಿನಲ್ಲಿ ಪುಟ್ಟ ಪ್ರಯತ್ನವನ್ನು ಇಲ್ಲಿನ ಲೇಖನದಲ್ಲಿ ಮಾಡಲಾಗಿದೆ.

18ನೇಯ ಶತಮಾನದಲ್ಲಿ ಫ್ಲೀಟರು ಸಂಗ್ರಹಿಸಿದ ಲಾವಣಿಗಳಲ್ಲಿ ; ಕಿಟೆಲ್‌ರು ಸಂಗ್ರಹಿಸಿದ ಗಾದೆಗಳಲ್ಲಿ ; ಅಬೆದುಬೊಯಿ ಅವರ Hindu manners, customs and ceremonies *ಕೃತಿಯಲ್ಲಿ; ಹೀಗೆ ಪಾಶ್ಚಾತ್ಯರಿಂದ ಸಂಗ್ರಹಿತವಾದ ಜಾನಪದ ವಸ್ತು ಮತ್ತು ಅಧ್ಯಯನದಲ್ಲಿ ಭಾರತೀಯ ಮಹಿಳೆ ಇಲ್ಲವೆ ಕನ್ನಡ ಮಹಿಳೆ ಮುಖ್ಯ ವಸ್ತುವಾಗಿರಲಿಲ್ಲ. ಸ್ಥಳೀಯ ಮನೋಭಾವವನ್ನು ಅರ್ಥ ಮಾಡಿಕೊಳ್ಳುವ ಉದ್ದೇಶವನ್ನಿಟ್ಟುಕೊಂಡು ಜಾನಪದ ಸಂಗ್ರಹ ಪ್ರಾರಂಭಿಸಿದ ವಿದೇಶಿಯರಿಗೆ ಭಾರತೀಯ ಮಹಿಳೆಯನ್ನು ಸಾಂಸ್ಕೃತಿಕ ನೆಲೆಯಲ್ಲಿಟ್ಟು ನೋಡುವ ಅಗತ್ಯವಿರಲಿಲ್ಲ. ಅಂದಿನ ರಾಜಕೀಯ, ಸಾಮಾಜಿಕ ಚಟುವಟಿಕೆಗಳೆಲ್ಲ ಪುರುಷಪ್ರಧಾನ -ವಾಗಿದ್ದವು. ''ಸ್ಥಳೀಯರ ಮನೋಭಾವ'' ಎನ್ನುವುದು ಕೂಡ ಪುರುಷರ ಕಾರ್ಯಚಟುವಟಿಕೆಗಳನ್ನು ಕೇಂದ್ರವಾಗಿರಿಸಿಕೊಂಡಿದೆ. ಕೌಟುಂಬಿಕ ಪರಿಧಿಯೊಳಗಿರುವ ಮಹಿಳೆಯರ ಮನಸ್ಸನ್ನು, ಅವರ ಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವ, ಪರೀಕ್ಷಿಸುವ ಉದ್ದೇಶ ಭಾರತದಲ್ಲಿದ್ದ ಪಾಶ್ಚಾತ್ಯ ಜನಪದ ಸಂಗ್ರಹಕಾರರ ಹಾಗೂ ಅಧ್ಯಯನಕಾರರದಾಗಿರಲಿಲ್ಲ. 1931 ರಲ್ಲಿ ಸಂಗ್ರಹಿತವಾದ 'ಗರತಿ ಹಾಡು' ಜನಪದ ಸಾಹಿತ್ಯ ಸಂಗ್ರಹಕ್ಕೆ ಹೊಸ ಬಗೆಯ ಚಾಲನೆಯನ್ನು ನೀಡಿತು. 22-11-1924ರಲ್ಲಿ ನಡೆದ 9ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಧುರಚೆನ್ನರು ಮಂಡಿಸಿದ 'ಹಳ್ಳಿಯ ಹಾಡುಗಳು' ಎನ್ನುವ ಪ್ರಬಂಧದಲ್ಲಿನ ಆಶಯಗಳು 'ಗರತಿ ಹಾಡು' ಸಂಗ್ರಹದ ಕೆಲಸದ ಮೇಲೆ ಗಾಢವಾದ ಪ್ರಭಾವವನ್ನು ಬೀರಿತ್ತು. ಅಲ್ಲದೇ ಗರತಿ ಹಾಡಿನ ಸಂಗ್ರಹಕಾರರಲ್ಲಿ ಮಧುರಚನ್ನರೂ ಒಬ್ಬರಾಗಿದ್ದರು ಎನ್ನುವುದನ್ನು ಮರೆಯುವಂತಿಲ್ಲ. ಮಧುರಚೆನ್ನರು 'ಹಳ್ಳಿಯ ಹಾಡುಗಳು' ಪ್ರಬಂಧದಲ್ಲಿ ಗಂಡಸರ ಹಾಡುಗಳು, ಹೆಣ್ಣುಮಕ್ಕಳ ಹಾಡುಗಳು ಎಂದು ಎರಡು ರೀತಿಯಲ್ಲಿ ವಿಂಗಡಿಸಿಕೊಂಡಿದ್ದಾರೆ. ಹೆಣ್ಣುಮಕ್ಕಳ ಹಾಡುಗಳ ಕುರಿತು ಮಧುರಚೆನ್ನರು ಭಾವುಕರಾಗಿಯೇ ಹೇಳುವರು. ''ಅಹಹ ! ಹೆಣ್ಣುಮಕ್ಕಳೆಂದರೆ ಹೆಣ್ಣುಮಕ್ಕಳು ! ಅವರ ಹೃದಯವೋ ಎಳೆ ಬಾಳೆಯ ಗೊನೆಗಿಂತ ಕೋಮಲ. ಇಂತಹ ಸುಕುಮಾರ ಹೃದಯದಿಂದ ಹೊರಟ ಭಾವನೆಯ ತೆರೆಗಳು ಎಳೆಮಕ್ಕಳ ಅರೆನಗೆಯ ಅಲೆಗಳಂತೆ ಮನೋಹರವಾಗಿರುವುದು ಸ್ವಾಭಾವಿಕ. ಆ ತೆರೆಗಳೋ ಬಿರುಗಾಳಿಗೆದ್ದ ಸರೋವರದ ತೆರೆಗಳಂತೆ ಭಯಂಕರವಾದವುಗಳಲ್ಲ ; ಮನೋಹರಾದ ಬೆಳ್ದಿಂಗಳಲ್ಲಿ ಮಂದ ಮಂದವಾಗಿ ಸುಳಿಯುವ ಸುಗಂಧ ಮಾರುತನಂತೆ ಮೆಲ್ಲಮೆಲ್ಲನೆ ಒಂದರ ಹಿಂದೊಂದು ಬಂದು ನಮ್ಮ ಬಗೆಯನರಳಿಸುವುದೇ ಈ ಅಲೆಗಳ ಧರ್ಮವು ''*

''ಮುದ್ದು ಬೀರಿ ಕುಣಿವ ಕುವರ'' ನು ಅವ ಸುಕುಮಾರ ಹೃದಯದಡಿಯಲ್ಲಿ ಮೂಡಿದನೋ ಆ ಹೃದಯದಿಂದಲೇ ಈ ಭಾವನೆಯ ತೆರೆಗಳು ಮೂಡಿ ಮುಂದುವರಿದವು. ಆದುದರಿಂದಲೇ ಈ ಅಲೆಗಳಿಗೆ ಆ ಎಳೆಗುವರನ ಎಳೆ ನೋಟದಂತಹ ಚಿತ್ತಾಕರ್ಷಣೆಯು ಬಂದಿದ ಎಳೆ ಮಗುವಿನ ಆಟದಲ್ಲಿ, ಎಳೆ ಮಗುವಿನ ನೋಟದಲ್ಲಿ ಎಳ ಮಗುವಿನ ಅಕ್ಕರತೆಯಲ್ಲಿ ಹೇಗೆ ಆಕೃತಿಮತೆಯಿರುವುದೋ ಹಾಗೆ ಈ ಹೆಣ್ಣೆದೆಯಿಂದ ಹೊರಟ ಹಾಡುಗಳಲ್ಲಿಯೂ ಆಕೃತಿಮತೆಯಿರುತ್ತದೆ ''(ಮಧುರಚೆನ್ನ: *1993 : ಪುಟ - 248*). ಮಧುರಚೆನ್ನರ ಈ ಮಾತುಗಳು ಮುಂದಿನ ಜನಪದ ಸಾಹಿತ್ಯ ಸಂಗ್ರಹಕಾರರನೇಕರನ್ನು ಗಾಢವಾಗಿ ಪ್ರಭಾವಿಸಿದವು. ಹಾಗೆಯೇ ಮುಂದುವರಿದು ಮಧುರಚೆನ್ನರು ಹೇಳಿದ ಮಾತುಗಳನ್ನು ಗಮನಿಸಲೇಬೇಕು -'' ನಾನು ಈವರೆಗೆ ಹೇಳಿದುದು ಆವ ಹೆಣ್ಣುಮಕ್ಕಳನ್ನು ಕುರಿತು ? ಅನ್ಯ ಸಂಸ್ಕೃತಿಯ ಸುಳಿಗಾಳಿಗೆ ಸಿಕ್ಕದಂತವರನ್ನು ಕುರಿತು. 'ಟಿಸ್‌ಪಿಸ್' ಎಂದು ಮಾತನಾಡುತ್ತಾ ಗಂಡಸರೊಡನೆ ತಿರುಗಾಡುವ ಗಂಡರಾಮೆಯರ ಹೃದಯವು ಇಷ್ಟೊಂದು ಕೋಮಲವಾಗಿರುತ್ತದೆಯೋ ಇಲ್ಲವೋ ನಾನರಿಯೆ. ಹಳ್ಳಿಯ ಮಾನವಂತೆಯರ ಹೃದಯವು ಮಾತ್ರ ಕೋಮಲವಾಗಿರುವುದು ಸ್ವಾಭಾವಿಕ' (ಮಧುರಚೆನ್ನ ; *1993 ;* ಪು *249*). ಮಹಿಳೆಯರು ಆಧುನಿಕ ಶಿಕ್ಷಣಕ್ಕೆ ಮುಖಾಮುಖಿಯಾಗ ಕೂಡದು ಎನ್ನುವ ಧೋರಣೆ ಮಧುರಚೆನ್ನರಲ್ಲಿ ಪ್ರಧಾನವಾಗಿ ಕಾಣುತ್ತದೆ. ಇಂಗ್ಲೀಷನ್ನು ಕಲಿಯುವುದೆಂದರೆ, ಕೇವಲ ಇಂಗ್ಲೀಷ್ ಭಾಷೆಯನ್ನು ಕಲಿಯುವುದೆಂದಲ್ಲ. ಇಂಗ್ಲೀಷ್ ಭಾಷೆಯನ್ನುವುದು ಇಂಗ್ಲೀಷ್ ಸಂಸ್ಕೃತಿ ಎನ್ನುವ ಅರ್ಥದಲ್ಲಿಯೇ ಅಂದು ಬಳಕೆಗೊಂಡಿದೆ. ಇಂಗ್ಲೀಷ್ ಶಿಕ್ಷಣ ಪಡೆಯುವುದೆಂದರೆ ಇಂಗ್ಲೀಷ್ ಸಂಸ್ಕೃತಿಗೆ ಒಳಗಾಗುವುದು ಎನ್ನುವ ಪರಿಕಲ್ಪನೆ ನಮ್ಮವರನ್ನು ಗಾಢವಾಗಿ ಆವರಿಸಿಕೊಂಡಿತ್ತು. ಇಂದು ಕೂಡ ಈ ಪರಿಕಲ್ಪನೆ ಬದಲಾಗಿದೆ ಎಂದು ಹೇಳಲಾಗುವುದಿಲ್ಲ. ಸ್ತ್ರೀಯರು ವಸಾಹತುಶಾಹಿ ಶಿಕ್ಷಣವನ್ನು ಪಡೆದರೆ ಸಾಂಪ್ರದಾಯಿಕ ಕೌಟುಂಬಿಕ ರಚನೆ ಛಿದ್ರವಾಗುತ್ತದೆ ಎಂದೇ ನಂಬಿದ್ದರು. ಅದಕ್ಕಾಗಿ ಮಹಿಳೆ ಇಂಗ್ಲೀಷ್ ಶಿಕ್ಷಣಕ್ಕೆ ಒಳಗಾಗದೆ 'ಗೃಹ' ಪರಿಕಲ್ಪನೆಯನ್ನು ಕಾಪಾಡಬೇಕು. ಗೃಹವು ಭಾರತೀಯ ಪರಂಪರೆಯ, ಸಂಸ್ಕೃತಿಯ ಪ್ರತಿನಿಧಿ ಎಂದೇ ನಂಬಿದ ಮಧುರಚೆನ್ನರು ಅಂದಿನ ಸಾಂಪ್ರದಾಯಿಕ ರಾಷ್ಟ್ರೀಯವಾದಿಗಳ ಪ್ರತಿನಿಧಿಯಾಗಿ ನಿಲ್ಲುತ್ತಾರೆ.

ಯೂರೋಪು ತನ್ನ ಆಧುನಿಕತೆಯಿಂದಾಗಿ ಇಡೀ ಪ್ರಪಂಚವನ್ನು ಹಿಡಿತದಲ್ಲಿಟ್ಟಿಕೊಂಡಿದೆ. ಆಧುನಿಕ ವಿಜ್ಞಾನ-ತಂತ್ರಜ್ಞಾನವು ಭಾರತದ ಭೌತಿಕ ಕ್ಷೇತ್ರದ ಮೇಲೆ ಯಜಮಾನಿಕೆಯನ್ನು ಸ್ಥಾಪಿಸತೊಡಗಿದಾಗ ನಮ್ಮವರು ಸ್ವಲ್ಪ ಆತಂಕಕ್ಕೆ ಒಳಗಾದರು. ವಸಾಹತುಶಾಹಿ ಶಿಕ್ಷಣ ಹಾಗೂ ಆಧನಿಕತೆಯಿಂದಾಗಿ ಕುಟುಂಬವು ನಾಶವಾಗುತ್ತಿದೆ ಎಂದುಕೊಂಡರು. ಕುಟುಂಬ ಅಂದರೆ ಮಹಿಳೆ ಎಂದೆ ಅರ್ಥಯಿಸಲಾಗಿದೆ. ಆಧುನಿಕತೆಯು ಮಹಿಳೆಯನ್ನು ಅಧಃಪತನಕ್ಕೆ ಎಳೆಯುತ್ತದೆ ಎಂದು ಭಾವಿಸಿದರು. ಹೀಗಾಗಿ ಹೆಂಗಸರನ್ನು ಸಂಸ್ಕೃತಿಯ ಕಾವಲುಗಾರರನ್ನಾಗಿಸಿ ಗೃಹಬಂಧನದಲ್ಲಿರಿಸಲು ಪ್ರಯತ್ನಿಸಿದರು. ಬಾಹ್ಯ ಪ್ರಪಂಚದಲ್ಲಿ ಅನ್ಯ ಸಂಸ್ಕೃತಿಯ ದಾಳಿ ಸಹಜವಾದುದು ಹಾಗೂ ಅದನ್ನು ತಡೆಗಟ್ಟಬಹುದು. ಆದರೆ ಅದು ಗೃಹದೊಳಗೆ ಕಾಲಿಟ್ಟರೆ 'ಸಂಸ್ಕೃತಿ' ತನ್ನ ಶುದ್ಧತೆಯನ್ನು, ಅನನ್ಯತೆಯನ್ನು ಕಳೆದುಕೊಂಡು ಬಿಡುತ್ತದೆ. ಹೀಗಾಗಿ ಹೆಣ್ಣು ಆಧುನಿಕ ಶಿಕ್ಷಣಕ್ಕೆ ಒಳಗಾಗದೇ ಕುಟುಂಬದಲ್ಲಿದ್ದುಕೊಂಡು 'ಸಂಸ್ಕೃತಿ' ಯನ್ನು ಕಾಯ್ದುಕೊಳ್ಳಬೇಕಾದ ಹೊಣೆಗಾರಿಕೆಯನ್ನು ಪದೆ ಪದೇ ಒತ್ತಿ, ಎತ್ತಿ ಹೇಳಿದರು. ಮಹಿಳೆ ಪುರುಷನಂತೆ ವಸಾಹತು ಶಿಕ್ಷಣಕ್ಕೆ ಒಳಗಾದರೆ, ಅವನಂತೆ ಆವಳೂ ಪ್ರಪಂಚಕ್ಕೆ ಕಾಲಿಡುತ್ತಾಳೆ. ಅನ್ಯ ಸಂಸ್ಕೃತಿಯ ದಾಳಿಗೆ ಸಿಕ್ಕು ಸಂಸ್ಕೃತಿಯ ಶಿಷ್ಟಾಚಾರವನ್ನು ಮರೆಯುವಳು. ಸ್ತ್ರೀಯನ್ನು ಕೇಂದ್ರವಾಗಿಟ್ಟಿಕೊಂಡು ರೂಪಿಸಿದ ಸಮಾಜ ಸುಧಾರಣಾ ಕಾನುನುಗಳು ಅವಳ ಮೇಲೆ, ಕುಟುಂಬದ ಮೇಲೆ ಆಗಾಧ ಪರಿಣಾಮವನ್ನು ಬೀರುತ್ತಿವೆ ಎಂದುಕೊಂಡರು. ಈ ಎಲ್ಲದರ ಪರಿಣಾಮವಾಗಿ ಗಂಡು-ಹೆಣ್ಣು ಇಬ್ಬರೂ ಹೊರಗೆ ಬಂದರೆ, 'ಗೃಹ'ವನ್ನು ಅಂದರೆ, ಭಾರತೀಯ ಪರಂಪರೆಯ ಪರಿಶುದ್ಧತೆಯನ್ನು ಕಾಯುವವರು ಯಾರು ? ಈ ಬಗೆಯ ಪ್ರಶ್ನೆಗಳು, ಸಂದೇಹಗಳು ಅಂದಿನ ರಾಷ್ಟ್ರೀಯವಾದಿಗಳಿಗೆ ತೀವ್ರವಾಗಿ ಕಾಡಿದವು. ರಾಷ್ಟ್ರೀಯ ಸಂಸ್ಕೃತಿಯ ರಕ್ಷಣೆಗೆ ಆಧುನಿಕ ಪುರುಷನ ಆಗತ್ಯಗಳಿಗೆ ತಕ್ಕಂತೆ ಸಂಸ್ಕೃತಿಯು ಮರುರೂಪಿತಗೊಂಡಿತ್ತು. ಪ್ರಪಂಚದಲ್ಲಿ ಅನೇಕ ಶಕ್ತಿಗಳೊಂದಿಗೆ ಸಂಘರ್ಷಿಸಿ ಬದುಕುತ್ತಿರುವ ಗಂಡಸಿಗೆ ಸಂಸ್ಕೃತಿಯ ಮೌಲ್ಯಗಳನ್ನು ಕಾಪಾಡಲಾಗುವುದಿಲ್ಲ. ಗೃಹದೊಳಗೆ ಇರುವ, ಇರಬೇಕಾದ ಹೆಣ್ಣು, ಭಾರತೀಯ ಸಂಸ್ಕೃತಿಗಳ ಮೌಲ್ಯಗಳನ್ನು ಕಾಪಾಡಬೇಕಾದುದು ಆವಳ ಗುರುತರ ಜವಾಬ್ದಾರಿ ಎನ್ನುವುದು ಅಂದಿನವರ ಧೋರಣೆಯಾಗಿತ್ತು. ಮಧುರಚೆನ್ನರು, ಆಧುನಿಕ ಶಿಕ್ಷಣಕ್ಕೆ ಒಳಗಾದ ಮಹಿಳೆಯರನ್ನು ವಿರೋಧಿಸುತ್ತಾ, ಅಂಥವರನ್ನು 'ಗಂಡರಾಮೆಯರು' ಎಂದು ಕರೆದಿರುವರು, ಸ್ತ್ರೀಯರು ಆಧುನೀಕರಣಗೊಳ್ಳುವುದನ್ನು ಅವರು ವಿರೋಧಿಸುತ್ತಾರೆ. ನವೀನ ಶಿಕ್ಷಣವನ್ನು ಪಡೆಯುತ್ತಿರುವ ಸ್ತ್ರೀಯರನ್ನು ಇಂತಹ ಮಾತುಗಳಿಂದ ಕೆಣಕಿ, ಅವರನ್ನು ಯಥಾಸ್ಥಿತಿಯಲ್ಲಿ ಉಳಿಸುವುದೇ ಆಗಿದೆ. ಮಹಿಳೆ ಇಂಗ್ಲೀಷ್ ಶಿಕ್ಷಣ ಪಡೆದರೆ, ಪಾವಿತ್ರ್ಯರಹಿತಳಾಗುವಳು, ಥಳಕುಬಳಕಿನ ಅಶ್ಲೀಲ ಜೀವನ ನಡೆಸುವಳು, ಒರಟು ಹಾಗೂ ಸ್ವೇಚ್ಛಾಚಾರಿಯಾಗುವಳು. ಅಕ್ಷರ ಲೋಕಕ್ಕೆ ಅಪರಿಚಿತಳಾದ ಸ್ತ್ರೀಯು, ಮಧುರಚೆನ್ನರ ಮಾತಿನಲ್ಲಿಯೇ ಹೇಳುವುದಾದರೆ ಹಳ್ಳಿಯ ಮಾನವಂತೆಯರ ವಿರುದ್ಧ ರೂಪವಾಗಿದ್ದಳು.

ಮಹಿಳೆ ವಸಾಹತುಶಾಹಿ ಶಿಕ್ಷಣ ಮತ್ತು ಆಧುನಿಕತೆಗೆ ಒಳಗಾದರೆ ಸಂಸ್ಕೃತಿಯ ಹೆಸರಿನಲ್ಲಿ ನಿರ್ವಚಿಸಿಕೊಂಡು ಬಂದ ಸ್ತ್ರೀಕುರಿತ ಮೌಲ್ಯಗಳು ಹುಸಿಯಾಗುತ್ತವೆ ಎಂದು ಮನಗಂಡರು. ಅದಕ್ಕಾಗಿ ಮಧುರಚೆನ್ನರು ಮಹಿಳೆ ಎಳೆಯ ಮಕ್ಕಳಂತೆ ಅಪ್ರಬುದ್ಧ ಮಾನಸಿಕ ಹಾಗೂ ಬೌದ್ಧಿಕ ಸ್ಥಿತಿಯನ್ನು ಹೊಂದಿರಬೇಕು ಎಂದು ಬಯಸಿದರು. ಅಂದಾಗ ಮಾತ್ರ ಪುರುಷ ಪ್ರಧಾನ ವ್ಯವಸ್ಥೆಯಲ್ಲಿನ ಮೌಲ್ಯಗಳನ್ನು ಮಹಿಳೆ ಸಂರಕ್ಷಿಸಬಲ್ಲಳು ಎಂದುಕೊಂಡರು. ಸ್ತ್ರೀ ಎಳೆ ಮಗುವಿನ ಮನಃಸ್ಥಿತಿಯಿಂದ ಪ್ರಬುದ್ಧತೆಗೆ ಕಾಲಿಟ್ಟರೆ ಸಾಂಸ್ಕೃತಿಕ ಸಂಗತಿಗಳನ್ನು ಅವಳು ಪರಿಶೀಲನೆಗೆ ಒಡ್ಡಬಹುದು. ಆದಕಾರಣ, ಮಹಿಳೆ ಯಥಾಸ್ಥಿತಿಯಲ್ಲಿ ಉಳಿಯಬೇಕೆಂದರೆ,

ವಸಾಹತುಶಾಹಿ ಆಧುನಿಕ ಸವಲತ್ತುಗಳಿಗೆ ಮುಖಾಮುಖಿಯಾಗಕೂಡದು. ಮಧುರಚೆನ್ನರು ಹೇಳಿದ ಅನ್ಯಭಾಷೆ ಹಾಗೂ ಅನ್ಯ ಸಂಸ್ಕೃತಿಯು ಇಂಗ್ಲೀಷ್ ಭಾಷೆ ಹಾಗೂ ಇಂಗ್ಲೀಷ್ ಸಂಸ್ಕೃತಿಯಲ್ಲದೆ ಬೇರೇನಲ್ಲ. ಮಹಿಳೆಯನ್ನು ಪುರುಷನಿಷ್ಠ ಹಾಗೂ ಸಂಸ್ಕೃತಿನಿಷ್ಠವಾಗಿರುವಂತೆ ಮಾಡಲು ಆಧುನಿಕ ಪ್ರಕ್ರಿಯೆಗೆ ಒಳಗಾದವರನ್ನು 'ಮಾನಬಿಟ್ಟವರು' ಎಂದು ಪ್ರಚಾರ ನೀಡತೊಡಗಿದರು. 19 ನೇ ಶತಮಾನದ ಆಧಿಭಾಗದಲ್ಲಿ ಸ್ತ್ರೀಶಿಕ್ಷಣ ವಿರೋಧಿ ನೀತಿಗಳೇ ಪ್ರಕಟಗೊಳ್ಳುತ್ತಿದ್ದವು 1924 ರಲ್ಲಿ ಮಧುರಚೆನ್ನರು ಅಭಿವ್ಯಕ್ತಿಸಿದ ಅಭಿಪ್ರಾಯದಲ್ಲಿ ಇದರ ಪ್ರತಿಬಿಂಬವನ್ನು ಕಾಣಬಹುದು. ಸ್ತ್ರೀಯರು ಪೂಜೆಗೊಳ್ಳುವಲ್ಲಿ ದೇವತೆಗಳು ನೆಲೆಸಿರುತ್ತಾರೆ, ತಾಯಿಗಿಂತ ದೇವರಿಲ್ಲ ಈ ಮೊದಲಾದ ಕಲ್ಪನೆಗಳು ವಸಾಹತುಶಾಹಿ ಸಂದರ್ಭದಲ್ಲಿ ಹೊಸರೂಪವನ್ನು ಪಡೆದುಕೊಂಡವು. ಮೇಲ್ಜಾತಿಯ ಮಧ್ಯಮವರ್ಗದ ಪುರುಷರು ಹಿಂದೆಂದಿಗಿಂತಲೂ ಬಲವಾಗಿ ಸ್ತ್ರೀಯರನ್ನು ಸಂಸ್ಕೃತಿಯ ರಕ್ಷಕಿಯರನ್ನಾಗಿ ಚಿತ್ರಿಸಿದರು. ಹಾಗು ತಮಗೆ ಬೇಕಾದ ಜನಪದ ಮಾದರಿಗಳ ಮೂಲಕ ಈ ಪರಿಕಲ್ಪನೆಯನ್ನು ಸಮರ್ಥಿಸಿದರು. ಅದನ್ನು ವೈದಿಕ ಚಿಂತನೆಗೆ ಒಗ್ಗಿಸಿಕೊಂಡರು ಈ ಹಿನ್ನೆಲೆಯಲ್ಲಿಯೇ ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನಗಳು ನಡೆದವು. ಜನಪದ ಸಾಹಿತ್ಯದಲ್ಲಿ ಮಹಿಳೆಯನ್ನು ಹೇಗೆ ಕಟ್ಟಿಕೊಡಲಾಗಿದೆ ಎನ್ನುವುದನ್ನು ವಿಶ್ಲೇಷಣೆ ಮಾಡಲಿಲ್ಲ, ಬದಲಾಗಿ ಅಂದಿನ ಸುಧಾರಣಾವಾದಿಗಳ ಪರಿಕಲ್ಪನೆಯಲ್ಲಿದ್ದ ಮಹಿಳೆಯನ್ನು ಜನಪದ ಸಾಹಿತ್ಯದ ಮೂಲಕ ಸಮರ್ಥಿಸಿದರು. ಗೃಹದ ಕುರಿತು ತಮಗಿರುವ ನಿಲುವುಗಳನ್ನು ಪ್ರತಿಪಾದಿಸಲು ಅನುಕೂಲವಾದ ಮಹಿಳಾ ಜನಪದ ಸಾಹಿತ್ಯವನ್ನು ಸಂಸ್ಕೃತಿಯ ಹೆಸರಲ್ಲಿ ನಿರ್ವಚಿಸಿ ಅದಕ್ಕೊಂದು ಮೌಲ್ಯ ತಂದುಕೊಟ್ಟರು.

ವಸಾಹತುಶಾಹಿಯ ದಾಳಿಯಿಂದ ಪಲ್ಲಟಗೊಳ್ಳುತ್ತಿರುವ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿಯನ್ನು ಮಹಿಳೆಯ ಮೇಲೆಯೇ ಹಾಕಲಾಯಿತು. ಹೆಂಗಸರನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವ ಅಪೇಕ್ಷೆಯ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಜನಪದ ಸಂಗ್ರಹ ಕಾರ್ಯ ಆರಂಭವಾಯಿತು. 1931 ರಲ್ಲಿ ಪ್ರಕಟಗೊಂಡ 'ಗರತಿ ಹಾಡು' ಪುರುಷನಿಷ್ಟ ಮೌಲ್ಯಗಳನ್ನು ಪ್ರತಿನಿಧಿಸುತ್ತದೆ. 'ಗರತಿ' ಈ ಪದವೇ ಸ್ತ್ರೀ ವಿರೋಧಿಯಾಗಿದ್ದು, ಪುರುಷಪ್ರಧಾನ ವ್ಯವಸ್ಥೆಯಲ್ಲಿ ಬದುಕುವ ಹೆಣ್ಣಿನ ಸೀಮಿತ ಬದುಕಿನ ಚೌಕಟ್ಟನ್ನು ಎತ್ತಿ ಹೇಳುತ್ತದೆ. ಹೆಣ್ಣುಮಕ್ಕಳು ಹೇಳಿದ ಜನಪದ ಗೀತೆಗಳ ಈ ಸಂಕಲನಕ್ಕೆ 'ಗರತಿ ಹಾಡು' ಎಂಬ ಶಿರೋನಾಮೆ ಇಟ್ಟಿದ್ದು ಆಕಸ್ಮಿಕವಲ್ಲ. ಆಧುನಿಕತೆಗೆ ಒಳಗಾದಾಗ, ಒಳಗಾಗುತ್ತಿರುವ ಮಹಿಳೆಯರ ವಿರುದ್ಧವಾಗಿ ಆಧುನಿಕತೆಗೆ ಒಳಗಾಗದವರನ್ನು ಎತ್ತಿ ಕಟ್ಟುವ ತಂತ್ರ ಅದರಲ್ಲಿದೆ. ''.....ಗೃಹಿಣಿಗೀತವೆಂದು ಈ ಸಂಗ್ರಹಕ್ಕೆ ಹೆಸರಿಡಬೇಕಾಗಿ ಇನ್ನೊಂದು ವಿಚಾರವಿತ್ತು. ಯಾಕೆಂದರೆ, ಹೆಣ್ಣಿನ ಸ್ವಭಾವ ಸಿದ್ಧವಾದ ಉದಾರ ಹೃದಯದ ಸಂಸ್ಕಾರಕ್ಕೆ ಇದು ಗೀತೆಯಾದೀತೆಂಬ ಅಪೇಕ್ಷೆಯಿಂದ. ಆದರೆ, ಗರತಿಯ ಹಾಡಿನ ಸೊಗಸು ಗೃಹಿಣಿಗೀತದಲ್ಲಿಲ್ಲವೆಂದು ಒಬ್ಬ ಸಹೃದಯರು ಹೇಳಿದರು. ಅದು ನಿಜವೇ...'' (ಬೇಂದ್ರೆ, ದ.ರಾ.'2000' ಪು.12-13) ವಸಾಹತುಶಾಹಿ ತಂದ ನವೀನತೆಯ ಗಾಳಿಯಿಂದಾಗಿ ಸ್ತ್ರೀಯರು ತಮ್ಮ ಸಹಜತೆಯನ್ನು ಹಾಗೂ ಪಾರಂಪರಿಕ ಸಂಸ್ಕಾರವನ್ನು ಮರೆಯುವರು. ಅದಕ್ಕಾಗಿ ಮಹಿಳೆಯರು ಪಾರಂಪರಿಕ ಸಂವೇದನೆಗಳನ್ನು ಕಾಯ್ದುಕೊಳ್ಳಬೇಕಾದರೆ 'ಮನೆಯಲ್ಲಿಯೇ ತಾಯಂದಿರಿಂದ, ಅಜ್ಜಿಯರಿಂದ, ಸಾಂಪ್ರದಾಯಿಕ ಶಿಕ್ಷಣವನ್ನು ಪಡೆದುಕೊಳ್ಳುವ ಜರೂರಿದೆ ಎಂದರು. ಆಧುನಿಕ ಶಿಕ್ಷಣ ಕ್ರಮ ಮಹಿಳೆಯರಿಗೆ ಒಪ್ಪುವುದಿಲ್ಲವೆನ್ನುವುದೇ ಅಂದಿನ ಪುರುಷಪ್ರಧಾನ ಸಮಾಜದ ನಿಲುವಾಗಿತ್ತು. ಈ ಧೋರಣೆಯನ್ನು ಮಧುರಚೆನ್ನರಲ್ಲಿಯಂತೆ 'ಗರತಿ ಹಾಡಿನ' ಸಂಗ್ರಹದ ಶಿರೋನಾಮೆಯಲ್ಲಿ ಮತ್ತು ಅದರಲ್ಲಿನ ಬೇಂದ್ರೆ ಅವರ ಪ್ರಾಸ್ತಾವಿಕ ನುಡಿಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ''ಜೀವನವೇ ದೇವತೆಯಾದ ತ್ರಿಪದಿ ಛಂದದಲ್ಲಿ ಹೊರಹೊಮ್ಮಿದ ಗರತಿ ಹಾಡಿನ ಋಷಿಗಳು ಹೆಣ್ಣುಮಕ್ಕಳು. ನಮ್ಮ ತಾಯಿ-ತಂಗಿಯರು, ಅಮ್ಮ - ಅಕ್ಕಂದಿರು, ಮಡದಿ ಮಕ್ಕಳು. ಹಾಗೆ ವಿಚಾರಿಸಿ ನೋಡಿದರೆ ಅವರದೇ ನಿಜವಾದ ಕಾವ್ಯ. ಉಳಿದುದು ಕಾವ್ಯದ ಛಾಯೆ, ಕಾವ್ಯವು ಕಾಂತಾಸಮ್ಮಿತಿಯೆಂದು ಹೇಳುವವರು, ಕಾಂತೆಯರ ಮಾತಿನಂತಿರುವುದೇ ಕಾವ್ಯವಾದರೆ, ಕಾಂತೆಯರ ಮಾತೆ ಕಾವ್ಯದ ಮಾತೆಯಲ್ಲವೇ ? ನಾವು ಕಾವ್ಯ ಎಂದು ಕರೆಯುವುದು ಅದರದೊಂದು ಸಂತಾನ: ಕಾಂತೆಯರ ಮಾತೆ ಕಾವ್ಯಮಾತೆ! ವೇದಕ್ಕೆ ಮಣಿಯದವರು, ಶಾಸ್ತ್ರಕ್ಕೆ ಬಗ್ಗದವರು ಕಾಂತೆಯರ ಮಾತಿಗೆ ಮೆತ್ತಗೆ ಹಣ್ಣಾಗುವುದನ್ನು ಕಂಡೇ ವೇದ ಶಾಸ್ತ್ರದ ತಿರುಳು ಕಾವ್ಯ ಮೋಹಿನಿಯ ಅವತಾರವನ್ನು ತಳೆದೀತು. ಇಲ್ಲಿ ಕಾಂತೆ ಎಂಬ ಮಾತನ್ನು 'ಹೆಂಡತಿ' ಎಂಬ ಸಂಕುಚಿತಾರ್ಥದಲ್ಲಿ ತಿಳಿದಿಕೊಳ್ಳದೆ ಸ್ತ್ರೀಜಾತಿ ಸಾಮಾನ್ಯವೆಂದು ತಿಳಿಯಬೇಕು. ಆ ಹೃದಯ, ಆ ದುಃಖ ಸಹಿಷ್ಣುತೆ 'ವಜ್ರಕುಸುಮ' ಅಸಾಧಾರಣೋಕ್ತಿ, ಧ್ವನಿಪ್ರಾಣವಾದ ಸ್ವಭಾವ, ವಸ್ತು ಸಹಜ ನಿವೇದನ ಪದ್ಧತಿ - ಒಂದೆರಡೇ-ಇವೆಲ್ಲ ಹೆಣ್ಣಿಗೆ 'ಹುಟ್ಟುಗುಣವಾಗಿದೆ'. ಆದಕಾರಣ, ವೇದಗಳು ದೇವನಿಃಶ್ವಸಿತಗಳಾದಂತೆ ಸ್ತ್ರೀಹೃದಯದ ನಿಃಶ್ವಸಿತವೇ ಕಾವ್ಯವೆಂದು ಹೇಳಬಹುದು ಸರಸ್ವತಿಯಿಲ್ಲದ ಸ್ವಾರಸ್ಯವುಂಟೇ ?'' (ಬೇಂದ್ರೆ, ದ.ರಾ;2000;ಪು.6-7) ಗರತಿ ಹಾಡಿನಲ್ಲಿಯ ಬೇಂದ್ರೆ ಅವರ ಪ್ರಾಸ್ತಾವಿಕ ಈ ಮಾತುಗಳಲ್ಲಿ ಹೆಣ್ಣನ್ನು 'ಗರತಿ' 'ಕಾಂತೆ' ಎಂದು ಕೌಟುಂಬಿಕ ಚೌಕಟ್ಟಿನಲ್ಲಿಯೇ ಪ್ರತಿಪಾದಿಸುವ ಪ್ರತಿಬಿಂಬಿಸುವ ಪ್ರಯತ್ನಗಳು ಸ್ಪಷ್ಟವಾಗಿ ಕಾಣಿಸುತ್ತವೆ. 'ಕಾಂತೆ' ಎನ್ನುವುದನ್ನು 'ಹೆಂಡತಿ' ಎನ್ನುವ ಸೀಮಿತಾರ್ಥದಲ್ಲಿ ಗ್ರಹಿಸದೇ ಸ್ತ್ರೀ ಸಾಮಾನ್ಯ ನೆಲೆಯಲ್ಲಿ ನೋಡಬೇಕೆಂದು ಅವರು ಹೇಳಿದರೂ, ಅವರ ಒಟ್ಟು ವಿಚಾರಗಳು ಆ ನೆಲೆಯನ್ನು ಮೀರಿಲ್ಲ. ಹೆಣ್ಣುಮಕ್ಕಳು ಹೇಳುವ ಹಾಡುಗಳನ್ನು ಗರತಿ ಹಾಡಾಗಿಸಿದ ಹಲಸಂಗಿ ಗೆಳೆಯರು ಮತ್ತು ಬೇಂದ್ರೆ ಅವರು ಸ್ತ್ರೀಸಾಮಾನ್ಯ ಜಾತಿಯ ಸ್ವರೂಪವನ್ನು ಇಲ್ಲವಾಗಿಸಿದರು. ಮಧುರಚೆನ್ನರು ಹೇಳಿದ ಹೆಣ್ಣುಮಕ್ಕಳ ಹಾಡುಗಳು ಕೂಡ 'ಗರತಿ' ಪರಿಕಲ್ಪನೆಯಲ್ಲಿಯೇ ನಿರ್ವಚಿಸಲ್ಪಟ್ಟಿತ್ತು ಎನ್ನುವುದನ್ನು ಮರೆಯುವಂತಿಲ್ಲ. ಜನಪದ ಮಹಿಳೆಯರಿಂದ ನಿರೂಪಿಸಲ್ಪಟ್ಟ ಗರತಿ ಹಾಡುಗಳನ್ನು ಕೌಟುಂಬಿಕ ಚೌಕಟ್ಟಿಗೆ ಅಳವಡಿಸಿ ಹೆಣ್ಣು, ಈ ಚೌಕಟ್ಟಿನಲ್ಲಿಯೇ ಮಾತನಾಡಬೇಕೆಂದು ಪರೋಕ್ಷವಾಗಿ ಒತ್ತಾಯಿಸಿದರು. ಸ್ತ್ರೀ

ಸಾಂಪ್ರದಾಯಿಕ ಸಂಗತಿಗಳನ್ನು ಅಭಿವ್ಯಕ್ತಿಸಲು ಶಕ್ತಳಾಗಿರುವಳೇ ಹೊರತು ಸಾಮಾಜಿಕ ಆಯಾಮಗಳನ್ನಲ್ಲ. ಎನ್ನುವುದು ಪುರುಷ ಪ್ರಧಾನ ನಿಲುವಾಗಿದೆ. ಜನಪದ ಮಹಿಳೆ ಹೇಳಿದ ಸಾಹಿತ್ಯವನ್ನು 'ಗೃಹ' ಕಲ್ಪನೆಯೊಳಗೆ ಬಂಧಿಸಿ, ಅವುಗಳನ್ನು ಗರತಿ ಹಾಡು ಎಂದು ಕರೆದರು ಮತ್ತು ಅಂಥವುಗಳನ್ನು ಹೆಣ್ಣುಮಕ್ಕಳ ಪಾಲಿಗೆ ಸಾಂಸ್ಕೃತಿಕ ಮೌಲ್ಯಗಳನ್ನಾಗಿಸಿ, ಅದರ ರಕ್ಷಣೆಯ ಜವಾಬ್ದಾರಿಯನ್ನು ಅವರ ಮೇಲೆಯೇ ಹೇರಿದರು. ಇದೇ ಚೌಕಟ್ಟಿನಲ್ಲಿಯೇ ಹಾಡುತ್ತಿದ್ದ ಜನಪದ ಮಹಿಳೆಯ ಪದಗಳು ವಿದ್ವತ್ ಜನರಿಂದ ಗೌರವಿಸಲ್ಪಟ್ಟವು. ಕಾರಣ ಗ್ರಾಮೀಣ ಮಹಿಳೆ, ಶಿಕ್ಷಣಕ್ಕೆ, ಆಧುನಿಕತೆಗೆ ವಿಮುಖಳಾಗಿದ್ದಳು. ಸ್ತ್ರೀ ಆಧುನಿಕತೆಗೆ ಒಳಗಾಗದಿದ್ದರೆ ಮಾತ್ರ ಪಾರಾಂಪರಿಕ ಮೌಲ್ಯಗಳನ್ನು ಕಾಪಾಡಲು ಸಾಧ್ಯವಾಗುತ್ತದೆ ಎಂದು ನಂಬಿದ್ದರು ಕೂಡ. ಗರತಿ ಹಾಡು ಸಂಗ್ರಹದ ಪ್ರಸ್ತಾವನೆಯಲ್ಲಿಯೇ ಬೇಂದ್ರೆಯವರು ಹೇಳಿದ ಈ ಮಾತುಗಳನ್ನು ಲಕ್ಷಿಸಲೇಬೇಕು - ''ಇವೆಲ್ಲವುಗಳಿಗಿಂತ ಹೆಚ್ಚಿನ ಅಪೇಕ್ಷೆಯೊಂದಿದೆ. ಯಾರಿಂದ ಇವು ಬಂದವೋ ಆ ಹೆಣ್ಣುಮಕ್ಕಳಲ್ಲಿಯೇ ಈ ಹಾಡುಗಳ ವಾಡಿಕೆಯು ಕಡೆಮೆಯಾಗುತ್ತಾ ಬಂದಿದೆ, ಹಾಗಾಗಬಾರದೆಂಬುದು. ಹೆಣ್ಣುಮಕ್ಕಳ ಹಾಡುಗಳನ್ನು ಅವಳ ಕೊರಳ ಕೊಳಲಿನಿಂದ ಕೇಳುವುದರಲ್ಲಿ ಒಂದು ಸೊಗಸಿದೆ. ಒಂದು ಜೀವದಾಯಿಕ ಶಕ್ತಿಯಿದೆ. ನವನಾಗರಿಕತೆಯೋ, ನೂತನ ಶಿಕ್ಷಣ ಸಂಪ್ರದಾಯವೋ, ಏನೋ ಒಂದು ಆ ಹಳೆಯ ಹಾಡಿನ ಸಂಪ್ರದಾಯವನ್ನು ಬೀಳುಗಳೆಯುತ್ತಿದೆ. ಕನ್ನಡ ಕವನ ತುಂಗೆಯ ತವರೂರು ಈ ಹಾಡುಗಳು. ಅದರ ಸಂಸ್ಕಾರವು ಬೇಡವೇ ಕನ್ನಡ ಮಕ್ಕಳಿಗೆ ಚಿಕ್ಕಂದಿನಲ್ಲಿ ? ಕನ್ನಡಿಗರಿಗೆ ಬೇಡವೇ ಬೆಳೆದು ದೊಡ್ಡವರಾದ ಮೇಲೆ ? ಇದನ್ನೋದುವ ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿ ಕೂಡಿ ಹಳ್ಳವಾಗಲಿ. ಹಳ್ಳಕೊಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡುವರೆ ?'' ಬಂಗಾಲದಲ್ಲಿ, ಮಹಾರಾಷ್ಟ್ರದಲ್ಲಿ, ಮೊದಮೊದಲು ಸ್ತ್ರೀಯರು ಶಿಕ್ಷಣಕ್ಕೆ ಒಳಗಾಗುವುದರ ಕುರಿತು ವಿರೋಧ ಕಂಡುಬಂದಿತು. ಆನಂತರದಲ್ಲಿ ಹೆಣ್ಣುಮಕ್ಕಳು ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ಪಡೆಯಲಿ ಎನ್ನುವಷ್ಟರಮಟ್ಟಿಗಾದರೂ ಅಲ್ಲಿಯ ಪುರುಷರು ಉದಾರವಾದಿಗಳಾದರು. ಕರ್ನಾಟಕದಲ್ಲಿ ಮಾತ್ರ ಪ್ರಾದೇಶಿಕ ಭಾಷೆಯಲ್ಲಿರಲಿ, ಅನ್ಯ ಭಾಷೆಯಲ್ಲಿರಲಿ ಶಿಕ್ಷಣದ ಸೋಂಕು ಮಹಿಳೆಗೆ ತಗುಲದಿರಲಿ ಎನ್ನುವ ಕಟ್ಟಾ ಸಂಪ್ರದಾಯವಾದಿ ಧೋರಣೆ ಇತ್ತು. ಹೀಗಾಗಿ ಆಧುನಿಕತೆಗೆ, ಶಿಕ್ಷಣಕ್ಕೆ ಒಳಗಾಗದೇ ಹಿಂದಿನ ಸಂಸ್ಕೃತಿಯನ್ನು ಕಾಯ್ದುಕೊಂಡು ಹೋಗಬೇಕು ಹಾಗೂ ಅದನ್ನು ಮುಂದಿನ ತಲೆಮಾರಿಗೂ ಸಾಗಿಸಬೇಕು ಎನ್ನುವ ಗುರುತರ ಜವಾಬ್ದಾರಿಯನ್ನು ಸ್ತ್ರೀಯರ ಹೆಗಲಿಗೆ ತಗುಲಿಹಾಕಿದರು. ಮಹಿಳೆಯರಿಗೆ ವಿದ್ಯೆ ದೊರೆತಮೇಲೆ, ತಮ್ಮ ಜೀವನದಲ್ಲಿ ಕೆಲವು ಸುಧಾರಣೆಗಳನ್ನು ಬಯಸುತ್ತಾರೆ. ಅದರ ಜೊತೆಗೆ ತಮ್ಮ ಹಕ್ಕುಗಳಿಗಾಗಿ ಒತ್ತಾಯಿಸುತ್ತಾರೆ. ಲಿಂಗಭೇದವನ್ನನುಸರಿಸಿ ಹುಟ್ಟಿಕೊಂಡ ಲಿಂಗತಾರತಮ್ಯವನ್ನು ಪ್ರಶ್ನಿಸುತ್ತಾರೆ. ಮಹಿಳೆ ಶಿಕ್ಷಣ ಪಡೆಯುವುದರಿಂದ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಅನೇಕ ಪಲ್ಲಟಗಳು ಕಾಣಿಸಿಕೊಳ್ಳುತ್ತವೆ. ಶತಮಾನಗಳಿಂದ ವಂಚಿಸಲ್ಪಟ್ಟ ಹಕ್ಕುಗಳನ್ನು ಮಹಿಳೆಯರು ಪಡೆದುಕೊಂಡಾಗ ಪಿತೃ ಪ್ರಧಾನ ಮೌಲ್ಯಗಳು ಮೊದಲಿನ ಪ್ರಾಮುಖ್ಯತೆಯನ್ನು ಕಳೆದುಕೊಂಡುಬಿಡುತ್ತವೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಬೇಕು ಎಂದು ಸುಧಾರಣಾವಾದಿಗಳು ವಾದಿಸಿದರೂ ಆ ಶಿಕ್ಷಣದ ಸ್ವರೂಪ ಹೇಗಿರಬೇಕು ಎಂಬ ಬಗ್ಗೆ ಬಹಳ ಚರ್ಚೆಗಳಾಗಿವೆ. ಗಂಡು ಮಕ್ಕಳಿಗಿರುವ ಶಿಕ್ಷಣ ಇವರಿಗೆ ಅಗತ್ಯವಿಲ್ಲ ಎಂಬುದನ್ನು ಆಗ ಬಹುತೇಕರು ಒಪ್ಪಿದ್ದರು. ಗರತಿ ಹಾಡಿನಲ್ಲಿನ ಬೇಂದ್ರೆಯವರ ಪ್ರಾಸ್ತಾವಿಕ ಮಾತುಗಳು ಮೇಲ್ನೋಟಕ್ಕೆ ಅನಕ್ಷರಸ್ಥ ಗ್ರಾಮೀಣ ಮಹಿಳೆಯರನ್ನು ಕೇಂದ್ರವಾಗಿರಿಸಿಕೊಂಡು ಉಪದೇಶಿಸಿದಂತೆ ಕಂಡು ಬರುತ್ತವೆ. ಆದರೆ, ಆಳದಲ್ಲಿ ಅಕ್ಷರಲೋಕಕ್ಕೆ ಒಳಗಾದ ಸ್ತ್ರೀಯರಿಗೆ ಕುಟುಂಬದಿಂದ ದೊರೆತ ಸಾಂಪ್ರದಾಯಿಕ ಶಿಕ್ಷಣವನ್ನು ಮರೆಯದಿರಲು ಮತ್ತು ಅದನ್ನು ಎಚ್ಚರದಿಂದ ಮುಂದಿನ ತಲೆಮಾರಿನ ಕುವರಿಯರಿಗೆ ಕಲಿಸಲು ಹೇಳುವ ಕಿವಿಮಾತು ಇದಾಗಿದೆ. ಯಾಕೆಂದರೆ, ಈ ಪ್ರಾಸ್ತಾವಿಕ ಮಾತುಗಳನ್ನು ಓದಲು ಶಕ್ತರಾದವರು ಅಕ್ಷರ ಬಲ್ಲ ಹೆಣ್ಣುಮಕ್ಕಳು, ಹಾಗೆ ನವೀನ ಶಿಕ್ಷಣಕ್ಕೆ ಒಳಗಾದ ಹಾಗು ಒಳಗಾಗುತ್ತಿರುವ ಪುರುಷರು, ಅವರು ಈ ಮಾತುಗಳಿಂದ ಪ್ರೇರಿತರಾಗಿ 'ಗೃಹ'ವನ್ನು ಆಧುನಿಕ ಸೋಂಕಿನಿಂದ ಸಂರಕ್ಷಿಸಬೇಕೆನ್ನುವ ಉದ್ದೇಶವು ಬೇಂದ್ರೆಯವರ ಮಾತುಗಳಲ್ಲಿ ಸ್ಪಷ್ಟವಾಗಿ ಮೂಡಿದೆ.

ಗರತಿ ಹಾಡಿನ ಸಂಕಲನವು ವೈದಿಕ, ಶೂದ್ರ ಸಮುದಾಯಗಳ ಪ್ರತಿನಿಧಿಯಂತೆ ಕಾಣುತ್ತದೆ. ಈ ಸಂಕಲನದಲ್ಲಿ ಹಾಡುಗಳುದ್ದಕ್ಕೂ ಆಗಾಗ ಕಾಣಿಸಿಕೊಳ್ಳುವ ಶಿವ, ಮಾದೇವ, ಕೃಷ್ಣ, ಹರಿ ಎನ್ನುವ ಪುರುಷ ದೇವರ ನಾಮಗಳನ್ನು ಗಮನಿಸಿದರೆ ಸಾಕು, ಈ ಹಾಡುಗಳು ಯಾವ ಸಮುದಾಯಕ್ಕೆ ಸೇರಿದವುಗಳು ಎನ್ನುವುದು ಸ್ಪಷ್ಟವಾಗುತ್ತದೆ. ವೈದಿಕ ಮತ್ತು ವೈದಿಕ ಸಂಸ್ಕೃತಿಯ ಪಿತೃಪ್ರಧಾನ ಮೌಲ್ಯಗಳ ಪ್ರಭಾವಕ್ಕೆ ಒಳಗಾದ ಶೂದ್ರ ಸಮುದಾಯದ ಅಭಿವ್ಯಕ್ತಿಯನ್ನು ಇಡೀ ಭಾರತದ ಹಾಗೂ ಕರ್ನಾಟಕದ ಗ್ರಾಮೀಣ ಸಮುದಾಯಗಳ ಅಭಿವ್ಯಕ್ತಿಯನ್ನಾಗಿಸಿದರು. ಎಲ್ಲಮ್ಮ, ದುರ್ಗಮ್ಮ, ಚೌಡಮ್ಮ ಈ ಮೊದಲಾದ ಸ್ತ್ರೀ ದೇವತೆಗಳನ್ನು ನೆನೆಯುವ ದಲಿತ ಸಮುದಾಯದ ಅಭಿವ್ಯಕ್ತಿ ದಾಖಲುಗೊಳ್ಳಲೇ ಇಲ್ಲ. ಎಲ್ಲಮ್ಮ ದುರ್ಗಮ್ಮ, ಚೌಡಮ್ಮ ಇವರುಗಳು ರಾಷ್ಟ್ರೀಯವಾದಿಗಳು ಕಟ್ಟಿಕೊಡುತ್ತಿದ್ದ ಗೃಹದ ಮಾದರಿಗೆ ಹೊಂದಿಕೊಳ್ಳುತ್ತಿರಲಿಲ್ಲ. ಸ್ವತಂತ್ರ ವ್ಯಕ್ತಿತ್ವವನ್ನು ಪಡೆದುಕೊಂಡಿರುವ ಈ ಹೆಣ್ಣುದೇವರು ವೈದಿಕ ಚಿಂತನೆಗೆ ದಕ್ಕದವರು. ಇವರು ಯಾವ ಸಾಮಾಜಿಕ ಸಂಸ್ಥೆಗಳಿಗೂ, ನಿರ್ಬಂಧನೆಗಳಿಗೂ, ಪ್ರಭುತ್ವಕ್ಕೂ ಬಾಗದವರು. ಗಂಡನಿಗೆ ನಿಷ್ಠರಾಗಿ ಮನೆ-ಮಕ್ಕಳು ಎಂದು ಕೌಟುಂಬಿಕ ಚೌಕಟ್ಟಿನೊಳಗೆ ಪಾವಿತ್ರ್ಯತೆಯನ್ನು ಕಾಯ್ದುಕೊಂಡು ಬಾಳುವ ಪುರುಷಾಧಿಕಾರದ ಭಾಷೆಯಲ್ಲಿಯೇ ಹೇಳುವುದಾದರೆ, 'ಗರತಿ' ಮಾದರಿಗೆ ಮೈಯೊಡ್ಡಿಕೊಳ್ಳುವಂಥವರಲ್ಲ. ಹೀಗಾಗಿ, ಬ್ರಾಹ್ಮಣ್ಯ, ಚಿಂತನೆಗೆ ಹತ್ತಿರವಾದ ವಿಚಾರಗಳನ್ನು ಪ್ರತಿನಿಧಿಸುವ ಜನಪದ ಸಾಹಿತ್ಯವನ್ನು ಮುಂದಿಟ್ಟುಕೊಂಡು, ಸಂಸ್ಕೃತಿಯನ್ನು ನಿರ್ವಚಿಸಿದರು. ಗರತಿ ಹಾಡಿನ ನಂತರ ಬಂದ ಜೀವನ ಸಂಗೀತ *(1933)*, ಮಲ್ಲಿಗೆ ದಂಡೆ *(1935)* ಮೊದಲಾದ ಜನಪದ ಕಾವ್ಯ ಸಂಗ್ರಹದಲ್ಲಿ ಪತಿವ್ರತೆ, ಶೀಲ, ಪಾವಿತ್ರ್ಯ, ವಿಧೇಯ ಹಾಗೂ ಕಷ್ಟಸಹಿಷ್ಣು ಎಂದು ಹೆಣ್ಣಿನ ಕುರಿತಿರುವ ಗ್ರಹಿತ ಮೌಲ್ಯಗಳನ್ನು ಒಡೆಯುವ ಅನೇಕ ಮಾದರಿಗಳು

ಕಾಣಿಸಿಕೊಂಡಿದ್ದರೂ, ಅದರ ಬಗ್ಗೆ ಸಂಗ್ರಹಕಾರರು, ಅಧ್ಯಯನಕಾರರು ಜಾಣಮೌನ ತಳೆದಿರುವರು.

ಜೀವನ ಸಂಗೀತದಲ್ಲಿಯ ಸಂಗ್ರಹಕಾರರ ಮಾತುಗಳನ್ನು ಗಮನಿಸಲೇಬೇಕು '' ಶೃಂಗಾರ ಲಾವಣಿಗಳಲ್ಲಿ ಬರುವ ಗ್ರಾಮ್ಯ ರೀತಿಯ ಕೆಲವು ಸಂಗತಿಗಳು ಸುಶಿಕ್ಷಿತರಿಗೆ ಅಸೌಜನ್ಯವೆಂದು ತೋರಬಹುದು. ಆದರೆ, ನಾನಿಲ್ಲಿ ಹೇಳುವುದೇನೆಂದರೆ, ಅಲ್ಲಲ್ಲಿ ಕಾಣುವ ಕವಿಕಲ್ಪನೆಯ ಅಗಾಧ ವೈಖರಿಯನ್ನು ತೋರಿಸಿಕೊಡುವುದಷ್ಟೆ ನಮ್ಮ ಉದ್ದೇಶವಿದೆ.'' (ಲಿಂಗಣ್ಣ ಸಿಂಪಿ ಮತ್ತು ಧೂಲಾ ಪಿ:2000:ಪು.107) ಸಂಗ್ರಹಕಾರರು ಹೇಳುವ ಗ್ರಾಮ್ಯ ರೀತಿಯ ಕೆಲವು ಸಂಗತಿಗಳು ದಲಿತ ಮತ್ತು ಶೂದ್ರ ಬದುಕಿನ ವಾಸ್ತವಗಳು. ಅದರ ಬಗ್ಗೆ ಮಾತನಾಡಲು ಲಿಂಗಣ್ಣ ಮತ್ತು ಧೂಲಾ ಇವರಿಬ್ಬರೂ ಮುಜುಗರ ಪಟ್ಟಿರುವುದು, ಮೇಲಿನ ಮಾತುಗಳಿಂದ ಸ್ಪಷ್ಟವಾಗುತ್ತದೆ. ಸಂಗ್ರಹಕಾರರು ಹೇಳುವ ''ಸುಶಿಕ್ಷಿತರಿಗೆ ಅಸೌಜನ್ಯವೆಂದು ತೋರುವ ಸಂಗತಿಗಳು'' ಅಂದಿನ ರಾಷ್ಟ್ರೀಯ ವಾದಿಗಳು ನಿರ್ವಚಿಸಿದ ಸಂಸ್ಕೃತಿಗೆ ವಿರುದ್ಧವಾದವುಗಳು. ಜನಪದ ಸಾಹಿತ್ಯದ ಭೂಮಿಕೆಯಿಂದ 'ಕವಿ ಕಲ್ಪನೆ'ಯ ಆಗಾಧತೆಯನ್ನು ಎತ್ತಿ ತೋರಿಸುವ ಮಹದಾಸೆಯು ಜೀವನ ಸಂಗೀತದ ಸಂಗ್ರಹಕ್ಕೆ ಪ್ರೇರಣೆ ನೀಡಿದೆ. ಇಲ್ಲಿ 'ಕವಿಕಲ್ಪನೆ', 'ಜನಸಾಮಾನ್ಯ' ಎನ್ನುವ ಪದಗಳು ಪುರುಷಸೂಚಕ ನೆಲೆಯಲ್ಲಿಯೇ ನಿಂತಿವೆ. ಜೀವನ ಸಂಗೀತದಲ್ಲಿಯ ಲಾವಣಿಕಾರರ ಹಾಡುಗಳು ಹೆಣ್ಣನ್ನು ಬಹಳ ಲಘುವಾಗಿ ಚಿತ್ರಿಸಿವೆ. ಇದು ಬೇರೆಯದೇ ಚರ್ಚೆಯನ್ನು ಬಯಸುತ್ತದೆ.

1935ರಲ್ಲಿ ಬಂದ 'ಮಲ್ಲಿಗೆ ದಂಡೆ' ಯಲ್ಲಿಯ ಬಹುಪಾಲು ಗೀತೆಗಳು ಪುರುಷಪ್ರಧಾನ ಸಮಾಜದ ಧೋರಣೆಗಳನ್ನೇ ಸಮರ್ಥಿಸುತ್ತವೆ. ಗಂಗಿ ಗೌರಿ ಹಾಡು (1,2), ಎಳ್ಳಮಾಸಿ ಹಾಡು, ಅಕ್ಕಮಹಾದೇವಿ ಹಾಡು ಮೊದಲಾದ ಗೀತೆಗಳಲ್ಲಿ ಸ್ತ್ರೀ ಪ್ರತಿರೋಧದ ಎಳೆಗಳಿವೆಯಾದರೂ ಸಂಗ್ರಹಕಾರರಾಗಲಿ, ಮುನ್ನಡಿ ಬರೆದವರಾಗಲಿ, ಅದನ್ನೆತ್ತಿ ಮಾತನಾಡುವುದಿಲ್ಲ. ಮಲ್ಲಿಗೆ ದಂಡೆಯ ಸಂಗ್ರಹಕಾರರಾದ ಕಾಪಸೆ ರೇವಪ್ಪನವರು ಟೀಕೆ ಟಿಪ್ಪಣಿಯಲ್ಲಿ 'ಸೋಬಾನ ಹಾಡುಗಳು' ಕುರಿತು ಬರೆದ ಮಾತುಗಳನ್ನು ಗಮನಿಸಬೇಕು '... ಹೆಣ್ಣಿನ ಶೃಂಗಾರವನ್ನು ಹೆಣ್ಣುಮಕ್ಕಳೇ ಬಣ್ಣಿಸಿದ್ದು ಸೋಬಾನದ ಹಾಡುಗಳಲ್ಲಿ ನೋಡಲಿಕ್ಕೆ ಸಿಗುವಂತಿದೆ. ಶೃಂಗಾರವನ್ನು ನೈಸರ್ಗಿಕ ಲಜ್ಜಾಶೀಲರಾದ ನಾರಿಯರು ವರ್ಣಿಸಿದ ರೀತಿಗೂ, ಸ್ವಚ್ಛಂದತೆಗಾಸ್ಪದವಿರುವ ಪುರುಷರು ವಣಿಸಿದ ರೀತಿಗೂ ಮಹದಂತರವಿರುತ್ತದೆ. ಹೆಣ್ಣುಮಕ್ಕಳು ವರ್ಣಿಸಿದ ಶೃಂಗಾರದಲ್ಲಿ ಒಂದು ಸಹಜವಾದ ಜೋಕೆಯಿದೆ' (ರೇವಪ್ಪ ಕಾಪಸೆ:2000: ಪು.274-275) ರೇವಪ್ಪನವರು ಹೇಳಿದ ಲಜ್ಜಾಶೀಲರಾದ ನಾರಿಯರು ಪುರುಷನಿಷ್ಠ ಮೌಲ್ಯಗಳಿಗೆ ಬದ್ಧರಾಗಿರುವವರು. ಇಡೀ ಸ್ತ್ರೀ ಸಮುದಾಯ ಈ ಮಾದರಿಯಲ್ಲಿಯೇ ಬದುಕಬೇಕೆಂದು ಪುರುಷಪ್ರಧಾನ ಸಮಾಜ ಬಯಸುತ್ತದೆ ಕೂಡ. ಮಹಿಳೆಯ ಮಾತುಗಳು ಅಶ್ಲೀಲದ ರೇಖೆಗೆ ಸಮೀಪಿಸಕೂಡದು. ಈ ಮೇಲಿನ ಮಾತು ಮೇಲ್ಜಾತಿಗಳ ಸ್ತ್ರೀಯನ್ನು ಕೇಂದ್ರವಾಗಿಟ್ಟುಕೊಂಡಿದೆ. ನಮ್ಮ ಸಂಸ್ಕೃತಿಯಲ್ಲಿ ಕೆಳ ಜಾತಿಯ ಮಹಿಳೆಯರು ಅಶ್ಲೀಲ ಮಾತನಾಡಿದರೆ ತಪ್ಪಲ್ಲ. ಯಾಕೆಂದರೆ ಅವರು ಅಸಂಸ್ಕೃತರು ಎಂದೇ ಗುರುತಿಸಲ್ಪಟ್ಟವರು. 'ಜೋಗತಿ-ಬಸವಿ-ಬಾಲಬಸವಿ' ಯೋಜನೆಗೆ ಸಂಬಂಧಿಸಿದಂತೆ ಮರಿಯಮ್ಮನ ಹಳ್ಳಿಗೆ ಕ್ಷೇತ್ರಕಾರ್ಯಕ್ಕೆ ಹೋದಾಗ, ವಕ್ತೃವೊಬ್ಬರು ಜೋಕುಮಾರ ಹಬ್ಬ ಸಮೀಪಿಸಿದ ದಿನಗಳಲ್ಲಿ ಅಶ್ಲೀಲ ಹಾಡುಗಳನ್ನು ಹೇಳುತ್ತಿದ್ದುದನ್ನು ನೆನಪಿಸಿಕೊಂಡರು. ಹೊಲತಿಯರು ಮಾತ್ರ ಅಂಥವುಗಳನ್ನು ಹಾಡುತ್ತಿದ್ದರು ಎಂದು ಹೇಳಿದರು. ಊರ ಹೊರಗಿನ ಕಟ್ಟೆಗೆ ಕುಳಿತು ಹರಟುತ್ತಿದ್ದ ಗಂಡಸರು, ಐದಾಣೆ-ಹತ್ತಾಣೆ ಕೊಟ್ಟು ಅಶ್ಲೀಲ ಹಾಡುಗಳನ್ನು ಹೇಳಿಸಿ ಸಂತೋಷಪಡುತ್ತಿದ್ದರಂತೆ. ಅಶ್ಲೀಲ ಹಾಡುಗಳನ್ನು ಮೇಲ್ಜಾತಿಯ ಹೆಣ್ಣುಮಕ್ಕಳೆದುರಿಗೆ ಹಾಡುವಂತಿಲ್ಲ. ಹಾಗೂ ಅವರು ಅಂಥವುಗಳನ್ನು ಕೇಳುವಂತಿಲ್ಲ. ನವೋದಯ ಸಂದರ್ಭದಲ್ಲಿದ್ದ ಈ ಬಗೆಯ ಸಾಮಾಜಿಕ ನಿರ್ಬಂಧಗಳು, ವಸಾಹತುಶಾಹಿ ಸಂದರ್ಭದಲ್ಲಿ ಸಂಸ್ಕೃತಿಯ ಹೆಸರಿನಲ್ಲಿ ನಡೆದ ಜನಪದ ಸಾಹಿತ್ಯ ಸಂಗ್ರಹದ ಹಿಂದಿರುವ ರಾಜಕಾರಣವನ್ನು ಬಯಲಿಗೆಳೆಯುತ್ತದೆ. 'ಸುಸಂಸ್ಕೃತ ಮಹಿಳೆ', 'ಗರತಿ' ಎಂದು ರಾಷ್ಟ್ರೀಯ ಸಂಸ್ಕೃತಿಯ ಹೆಸರಿನಲ್ಲಿ ನಿರ್ವಚಿಸಲ್ಪಟ್ಟ ಮಹಿಳೆಯರು ಮೇಲ್ಜಾತಿಯನ್ನು ಮಾತ್ರ ಪ್ರತಿನಿಧಿಸುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ.

'ಕರ್ನಾಟಕ ಜನಪದ ಸಾಹಿತ್ಯ' ಎನ್ನುವ ಲೇಖನದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರು, ಮಹಿಳಾ ಜನಪದ ಹಾಡುಗಾರರನ್ನು 'ಜನಪದ ಕವಯಿತ್ರಿ' ಎಂದು ಕರೆಯುತ್ತ, ತಾಯಿ-ತೌರಿನ ಕುರಿತು ಜನಪದ ಮಹಿಳೆ ಹಾಡಿದ ಗೀತೆಗಳನ್ನು ಹೀಗೆ ಹೊಗಳುತ್ತಾರೆ. '' ತಾಯಿತನದ ಮುಖ್ಯ ತತ್ತ್ವ ಈ ಪದಗಳಲ್ಲಿ ಉಕ್ತವಾಗಿದೆ. ಇದು ಮಾತೃ ಸಂಹಿತೆ, ಧಾತ್ರಿ ಉಪನಿಷತ್'' (ವೆಂಕಟೇಶ್ ಅಯ್ಯಂಗಾರ್ ಮಾಸ್ತಿ : ಪು. 4) ಭಾರತೀಯ ಸಂಸ್ಕೃತಿಗಳಲ್ಲಿ 'ತಾಯಿ' ಎನ್ನುವುದು ಆರಾಧನಾ ನೆಲೆಯಲ್ಲಿ ನಿಲುಗಡೆಗೊಳ್ಳುತ್ತದೆ. ಈ ಆರಾಧನಾ ಪ್ರಕ್ರಿಯೆ ಭೌತಿಕ ಅಸ್ತಿತ್ವವನ್ನು ನಿರಾಕರಿಸುತ್ತದೆ. ಅರವಿಂದ, ವಿವೇಕಾನಂದ, ಗಾಂಧಿ ಮೊದಲಾದವರು ಹುಟ್ಟುಹಾಕಿದ ಆಧ್ಯಾತ್ಮಿಕ ಪರಂಪರೆಯಂತೂ 'ತಾಯಿ' ನೆಲೆಯನ್ನು 'ಪರಿಪೂರ್ಣ' ಎನ್ನುವಂತೆ ಹಾಡಿಹೊಗಳಿತು. ರಾಷ್ಟ್ರೀಯವಾದಿ ಆಂದೋಲನದಲ್ಲಿ ರಾಮಕೃಷ್ಣ ಪರಮಹಂಸ, ಅರವಿಂದ, ವಿವೇಕಾನಂದ, ಗಾಂಧಿ ಮೊದಲಾದ ಮಹನೀಯರ ವಿಚಾರ ಧಾರೆಗಳು ಪರಿಣಾಮಕಾರಿ ಪ್ರಭಾವವನ್ನು ಬೀರಿದ್ದವು. ಹೀಗೆ ಧರ್ಮ ಕೇಂದ್ರಿತವಾದ ರಾಷ್ಟ್ರ ಪ್ರೇಮ ಭಾರತದಲ್ಲಿ ಉದಯವಾಯಿತು. ರಾಷ್ಟ್ರೀಯವಾದಿ ಚಳುವಳಿಯು ಹೆಣ್ಣನ್ನು ದೈವಾಂಶ ನೆಲೆಯಲ್ಲಿ ನಿರ್ವಚಿಸಿ, ಶಕ್ತಿಯ ನಿಲುಮೆಯಲ್ಲಿ ವ್ಯಾಖ್ಯಾನಿಸಿತು. ಮಹಿಳೆಯ ಕುರಿತಿರುವ ಈ ವೈಭವೀಕರಣವು ಮತ್ತಷ್ಟು ವಿಸ್ತರಿಸಿ 'ಭಾರತ' ''ಭಾರತಾಂಬೆ'' ಆಯಿತು. ಕರ್ನಾಟಕ, ಕನ್ನಡಾಂಬೆ ಆಯಿತು. ನಾವು ವಾಸಿಸುವ ಭೌಗೋಳಿಕ ಪ್ರದೇಶ, ಕೇವಲ ಪ್ರದೇಶವಲ್ಲ. ಅದು 'ಮಾತೃಭೂಮಿ', ಕರ್ನಾಟಕವನ್ನು, ಭಾರತವನ್ನು, ಕರ್ನಾಟಕಮಾತೆ, ಭಾರತಮಾತೆ ಎಂದು ತಾಯ್ತನದ ನೆಲೆಯಲ್ಲಿಯೇ ವ್ಯಾಖ್ಯಾನಿಸಲಾಯಿತು. ವಸಾಹತುಶಾಹಿ ಮೌಲ್ಯಗಳನ್ನು ವಿರೋಧಿಸಲು ಆ ಸಂದರ್ಭದಲ್ಲಿ ಉಂಟಾದ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಎದುರಿಸಲು, ಮಹಿಳೆಯನ್ನು ಕುಟುಂಬ ಬಂಧಿಯನ್ನಾಗಿಸಲು ಈ ಬಗೆಯ ನಿರ್ವಚನಗಳು ಪ್ರಖರವಾಗಿ ಕಾಣಿಸಿಕೊಳ್ಳತೊಡಗಿದವು. ಈ ಸಾಂಸ್ಕೃತಿಕ ಪಲ್ಲಟದ ಪರಿಣಾಮ ಎಲ್ಲ ಕ್ಷೇತ್ರಗಳ ಮೇಲೆ ಪ್ರಭಾವಿಸಿತು. ಇದಕ್ಕೆ ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನ ಎರಡೂ ಹೊರತಾಗಿಲ್ಲ.

- ಮುಂದುವರೆಯುವುದು

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 100 ರೂ

ಸಂಸ್ಥೆಗಳಿಗೆ : 150 ರೂ

ಸಂ.ಮಂಡಳಿ

REGD No. : CPMG/KA/BGE/289/2003 - 05

BOOK-POST
PRINTED MATTER



ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067

26
Manjula C.G., No. 4, Vaishaka.
2^{nd} cross, Marakam road,
Ashok nagar, Bangalore-25.